ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

ಮಾಸಪತ್ರಿಕೆ

# JSS VARTHAPATHRA

Monthly Magazine

ಸಂಪುಟ 11 ಸಂಚಿಕೆ 1 ಜನವರಿ 2026



ಮಳವಳ್ಳಿಯಲ್ಲಿ ನಡೆದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸನ್ಮಾನ್ಯ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮುರವರು ಉದ್ಘಾಟಿಸಿದರು. ದೇಗುಲಮಠದ ಕನಕಪುರ ಕಿರಿಯ ಶ್ರೀಗಳು, ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಶ್ರೀ ಥಾವರ್ ಚಂದ್ ಗೆಹ್ಲೋತ್, ಶ್ರೀ ಎನ್. ಚಲುವರಾಯಸ್ವಾಮಿ ಹಾಗೂ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರುಗಳಿದ್ದಾರೆ (16 ಡಿಸೆಂಬರ್ 2025)



ಮಳವಳ್ಳಿಯಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಮಾತನಾಡುತ್ತಿರುವುದು. ಶ್ರೀ ಮರಿತಿಬ್ಬೇಗೌಡ, ಶ್ರೀಮತಿ ವಿಜಯಲಕ್ಷ್ಮಿ, ಶ್ರೀ ಮಧು ಜಿ. ಮಾದೇಗೌಡ ಶ್ರೀಮತಿ ಮಲ್ಲಾಜಮ್ಮ, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಕೆ.ಎಂ. ಉದಯ್, ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಶ್ರೀ ವಾಲ್ಮೀಕಿಪೀಠದ ಜಗದ್ಗುರುಗಳು, ಕನಕಪುರದ ಉಭಯ ಶ್ರೀಗಳು ಮತ್ತು ಶ್ರೀ ಸಿದ್ಧಗಂಗಾ ಶ್ರೀಗಳಿದ್ದಾರೆ. (21 ಡಿಸೆಂಬರ್ 2025)



ಮಳವಳ್ಳಿಯಲ್ಲಿ ನಡೆದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜೆಎಸ್‌ಎಸ್ ಗ್ರಂಥಮಾಲೆಯ 'ವಿಚಾರ ಲಹರಿ' ಕೃತಿ ಬಿಡುಗಡೆ ಸಮಾರಂಭದ ಸಂದರ್ಭದಲ್ಲಿ ಕನಕಪುರ ದೇಗುಲಮಠದ ಕಿರಿಯ ಶ್ರೀಗಳು, ಚಲನಚಿತ್ರ ಕಲಾವಿದ ಶ್ರೀ ಶಿವರಾಜ್‌ಕುಮಾರ್ ಶ್ರೀ ಬಿ.ಎಲ್. ಸಂತೋಷ್ ಮತ್ತು ಶ್ರೀ ನಿಖಿಲ್ ಕುಮಾರಸ್ವಾಮಿಯವರುಗಳಿದ್ದಾರೆ. (18 ಡಿಸೆಂಬರ್ 2025)

# ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು ಸ್ಫೂರ್ತಿಯ ದೀಪ



ಮಳವಳ್ಳಿಯಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವವನ್ನು ಸನ್ಮಾನ್ಯ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮುರವರು ಉದ್ಘಾಟಿಸಿ ಮಾತನಾಡುತ್ತಿರುವುದು. (16 ಡಿಸೆಂಬರ್ 2025)

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು ಸ್ಫೂರ್ತಿಯ ದೀಪವಾಗಿ ಬೆಳಗುತ್ತಿದ್ದಾರೆ ಎಂದು ಸನ್ಮಾನ್ಯ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮುರವರು ಹೇಳಿದರು.

ಮಳವಳ್ಳಿಯಲ್ಲಿ ಆಯೋಜಿಸಿದ್ದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವವನ್ನು ದಿನಾಂಕ 16.12.2025 ರಂದು ಉದ್ಘಾಟಿಸಿ ಅವರು ಮಾತನಾಡಿದರು. ಯುಗ ಯುಗಾಂತರಗಳಲ್ಲಿ ಸಂತರು ಕರುಣೆಯ ಮೂಲಕ ಮಾನವೀಯತೆಯನ್ನು ಬೆಳಗಿಸಿದ್ದಾರೆ. ನಿಜವಾದ ಶ್ರೇಷ್ಠತೆ ಅಧಿಕಾರ ಅಥವಾ ಸಂಪತ್ತಿನಲ್ಲಿಲ್ಲ. ಬದಲಿಗೆ ತ್ಯಾಗ, ಸೇವೆ ಮತ್ತು ಆಧ್ಯಾತ್ಮಿಕ ಬಲದಲ್ಲಿದೆ ಎಂಬುದನ್ನು ಅವರ ಜೀವನವು ನಮಗೆ ನೆನಪಿಸುತ್ತದೆ. ಅಂತಹ ಶ್ರೇಷ್ಠ ಸಂತರಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ಒಬ್ಬರು. ಶ್ರೀಮಠದ ಮಾರ್ಗದರ್ಶನ ಮತ್ತು ಪೋಷಣೆಯಡಿಯಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠವು ಪ್ರಪಂಚಾದ್ಯಂತ ಇರುವ ಭಾರತದ ವಿಶಿಷ್ಟ ಸಂಸ್ಥೆಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಇದು ಆರೋಗ್ಯ ರಕ್ಷಣೆ, ಮಹಿಳೆಯರ ಸಬಲೀಕರಣ, ಗ್ರಾಮೀಣ ಸಮುದಾಯಗಳನ್ನು ಉನ್ನತೀಕರಿಸುವುದು, ಸಂಸ್ಕೃತಿಯನ್ನು ಸಂರಕ್ಷಿಸುವುದು ಮತ್ತು ಸಮಗ್ರ ಸಮಾಜದ ಅಡಿಪಾಯವನ್ನು ಬಲಪಡಿಸುವಲ್ಲಿ ಯುವ ಮನಸ್ಸುಗಳನ್ನು ರೂಪಿಸುವಲ್ಲಿ ತೊಡಗಿಸಿಕೊಂಡಿದೆ. ಭಾರತ ಸರ್ಕಾರವು ಈ ಸಮಗ್ರ ದೃಷ್ಟಿಕೋನದೊಂದಿಗೆ ಕಾರ್ಯ ನಿರ್ವಹಿಸುತ್ತಿವೆ. ಸುತ್ತೂರು ಮಠದಂತಹ ಸಂಸ್ಥೆಗಳು ಈ ರಾಷ್ಟ್ರೀಯ ಪ್ರಯತ್ನದಲ್ಲಿ ಗಣನೀಯ ಪಾತ್ರವನ್ನು ವಹಿಸಿದೆ. ಭಾರತದ ಭವಿಷ್ಯವು ಕೌಶಲ ಮತ್ತು ಜ್ಞಾನದಿಂದ ಮಾತ್ರವಲ್ಲದೆ ನೈತಿಕತೆಯ ಪ್ರಜ್ಞೆಯಿಂದ ರೂಪುಗೊಳ್ಳುತ್ತದೆ. ಧರ್ಮ, ಆರೋಗ್ಯ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಸುತ್ತೂರು ಮಠ ಹಿಂದಿನಿಂದಲೂ ನಿರಂತರವಾಗಿ ಶ್ರಮಿಸುತ್ತಿದೆ. ಶ್ರೀಮಠದ ರಾಜೇಂದ್ರ ಶ್ರೀಗಳು ಶಿಕ್ಷಣದ ಬಗ್ಗೆ ಸಾಕಷ್ಟು ದೂರದೃಷ್ಟಿ ಇಟ್ಟುಕೊಂಡಿದ್ದರು. ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಅಂತಹ ಸೇವೆಯ ಪರಂಪರೆಯನ್ನು ಇಂದಿಗೂ ಮುಂದುವರೆಸಿಕೊಂಡು ಬರುತ್ತಿರುವುದು ಶ್ಲಾಘನೀಯ. ಜೆಎಸ್ಎಸ್ ಸಂಸ್ಥೆ ದೇಶದಲ್ಲಷ್ಟೇ ಅಲ್ಲದೆ

ವಿದೇಶಗಳಲ್ಲಿಯೂ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಗಳನ್ನು ಆರಂಭಿಸಿದೆ. ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸೇವೆ ಅಪಾರವಾಗಿದೆ ಎಂದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಚನ ನೀಡಿ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ಲೋಕ ಕಲ್ಯಾಣಕ್ಕಾಗಿ ಮಾಡಿದ ಕಾರ್ಯಗಳು ನಿರಂತರವಾಗಿ ನಡೆಯಬೇಕು. ಅವರ ಜಯಂತಿ ಮಹೋತ್ಸವ ನಾನಾ ಜಿಲ್ಲೆಗಳಲ್ಲಿ ನಡೆದುಕೊಂಡು ಬರುತ್ತಿದೆ. ಶಿವಯೋಗಿಗಳು ಸಾವಿರಾರು ವರ್ಷಗಳ ಹಿಂದೆ ಎರಡು ರಾಜ ಮನೆತನಗಳ ನಡುವೆ ಇದ್ದಂತಹ ವೈಷಮ್ಯವನ್ನು ಹೋಗಲಾಡಿಸಿ ಸಾಮರಸ್ಯ, ಪ್ರೀತಿ, ಸ್ನೇಹದ ಬೀಜವನ್ನು ಬಿತ್ತಿ ನಾಡಿಗೆ ಕಲ್ಯಾಣ ತಂದವರು. ಅವರ ಹಾದಿಯಲ್ಲಿಯೇ ಎಲ್ಲಾ ಗುರುಗಳು ಶ್ರೀಮಠವನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಸುಮಾರು ಆರು ವರ್ಷಗಳ ಹಿಂದೆಯೇ ಜಯಂತ್ಯುತ್ಸವ ಮಳವಳ್ಳಿ ನಡೆಯಬೇಕಿತ್ತು. ಆದರೆ, ಕಾರಣಾಂತರಗಳಿಂದ ಸಾಧ್ಯವಾಗಿರಲಿಲ್ಲ. ಬಹುಶಃ ಆರು ವರ್ಷಗಳ ಹಿಂದೆ ಆಗಿದ್ದರೆ ರಾಷ್ಟ್ರಪತಿಗಳು ಕಾರ್ಯಕ್ರಮ ಉದ್ಘಾಟಿಸುತ್ತಿರಲಿಲ್ಲ. ಇದು ದೈವ ಸಂಕಲ್ಪ. ಮಳವಳ್ಳಿಯಲ್ಲಿ 1066ನೇ ಜಯಂತಿ ಮಹೋತ್ಸವ ಕಾರ್ಯಕ್ರಮ ನಡೆಯುವುದಕ್ಕೆ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರೇ ಕಾರಣ. ಜೊತೆಗೆ ರಾಷ್ಟ್ರಪತಿಗಳು ಸಮಾರಂಭಕ್ಕೆ ಬರುವುದಕ್ಕೂ ಅವರೇ ಕಾರಣ. ಶಾಸಕರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರು ಅವರ ಮನೆಯ ಕಾರ್ಯಕ್ರಮದಂತೆ ಮುತುವರ್ಜಿ ವಹಿಸಿ ಅಚ್ಚುಕಟ್ಟಾಗಿ ರೂಪಿಸಿದ್ದಾರೆ. ಮಳವಳ್ಳಿಯ ಎಲ್ಲಾ ಸಂಘ ಸಂಸ್ಥೆಗಳು ಹಾಗೂ ಮುಖಂಡರು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕರಿಸಿದ್ದಾರೆ ಎಂದು ಹೇಳಿದರು.

ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋತ್‌ರವರು ಸುತ್ತೂರು ಶ್ರೀಮಠವು ಧರ್ಮ ಮತ್ತು ಶಕ್ತಿಯ ತಾಣವಾಗಿದೆ. ದೇಶದ ಅತ್ಯಂತ ಪ್ರಸಿದ್ಧ ಮಠಗಳಲ್ಲಿ ಒಂದಾಗಿದೆ. ಸಾವಿರ ವರ್ಷಗಳಿಗೂ ಹೆಚ್ಚಿನ ಇತಿಹಾಸ ಹೊಂದಿರುವ ಶ್ರೀಮಠವು ಸಾಮಾಜಿಕ ಮತ್ತು ಧಾರ್ಮಿಕ ಪ್ರಗತಿಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು ಭಾರತೀಯ ಸಂತ ಪರಂಪರೆಯ ಪ್ರಕಾಶಮಾನವಾದ ಸ್ತಂಭವಾಗಿದ್ದರು. ಮಾನವೀಯತೆಯನ್ನು ಜಾಗೃತಗೊಳಿಸುವುದು ಅವರ ಮೂಲ ಉದ್ದೇಶವಾಗಿತ್ತು ಎಂದರು.

'ಮಳವಳ್ಳಿ ಶ್ರೀಪ್ರಭೆ' ಸಂಚಿಕೆಯನ್ನು ಬಿಡುಗಡೆ ಮಾಡಿದ ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಸುತ್ತೂರು ಶ್ರೀಮಠಕ್ಕೂ ದೇವೇಗೌಡರ ಕುಟುಂಬಕ್ಕೂ ಅವಿನಾಭಾವ ಸಂಬಂಧವಿದೆ. ಹಿಂದಿನ ಪೂಜ್ಯರ ಕೃಪೆಯೂ ನಮ್ಮ ಕುಟುಂಬದ ಮೇಲೆ ಅಪಾರವಾಗಿತ್ತು. ದೇವೇಗೌಡರ ಆರಂಭಿಕ ರಾಜಕೀಯ ಬೆಳವಣಿಗೆಯಲ್ಲಿ ಹಿರಿಯ ಶ್ರೀಗಳ ಕೊಡುಗೆ ಅಪಾರವಾಗಿದೆ. ಈಗಿನ ಪೂಜ್ಯರ ಜೊತೆಗೆ ಹಿಂದಿನ ಪೂಜ್ಯರ ದಿವ್ಯಾಶೀರ್ವಾದ ನಮ್ಮ ಕುಟುಂಬದ ಮೇಲಿದೆ. ಅದಕ್ಕಾಗಿಯೇ ನಮ್ಮ ತಂದೆಯವರು ಸುತ್ತೂರು ಶ್ರೀಕ್ಷೇತ್ರವನ್ನು ಯಾವತ್ತೂ ಮರೆಯಬಾರದು ಎಂದು ನನಗೆ ನೂರಾರು ಬಾರಿ ಹೇಳಿದ್ದಾರೆ. ಈ ಮಾತನ್ನು ನನ್ನ ಹೃದಯದಿಂದ ಹೇಳುತ್ತಿದ್ದೇನೆ. ಸುತ್ತೂರು ಶ್ರೀಕ್ಷೇತ್ರವು ಅನ್ನ, ಅಕ್ಷರ, ಆಶ್ರಯ ನೀಡುವ ಮೂಲಕ ಅಸಂಖ್ಯಾತ ಬಡಮಕ್ಕಳಿಗೆ ಬೆಳಕಾಗಿದೆ. ಇವತ್ತು ಶ್ರೀಮಠವು ರಾಜ್ಯ, ದೇಶ ಮಾತ್ರವಲ್ಲದೆ ಜಾಗತಿಕ ಮಟ್ಟದಲ್ಲಿಯೂ ಅಗಾಧವಾಗಿ ಬೆಳೆದಿದೆ. ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹವಾಗಿ ಸೇವೆ ಮಾಡುತ್ತಿದೆ. ಈಗಿರುವ ಪೂಜ್ಯರು ಮಠದ ಪರಂಪರೆಯನ್ನು ಮುಂದುವರೆಸುತ್ತಾ ನಾಡಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಮಳವಳ್ಳಿ ಪ್ರಕೃತಿಯ ಮಡಿಲಲ್ಲಿ ಇರುವ ಪುಣ್ಯಭೂಮಿ. ಪೂಜ್ಯರ ಜಯಂತಿ ಮಹೋತ್ಸವದಲ್ಲಿ ರಾಷ್ಟ್ರಪತಿಗಳು ಭಾಗಿಯಾಗಿರುವುದರಿಂದ ಮಳವಳ್ಳಿ ಪಟ್ಟಣವು ಇತಿಹಾಸದಲ್ಲಿ ಚಿರಸ್ಥಾಯಿ ಆಗಲಿದೆ ಎಂದರು.

ಕನಕಪುರ ಶ್ರೀ ದೇಗುಲ ಮಠದ ಶ್ರೀ ಚನ್ನಬಸವ ಸ್ವಾಮಿಗಳು, ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ

ಶ್ರೀ ಎನ್. ಚಲುವರಾಯಸ್ವಾಮಿಯವರು ಉಪಸ್ಥಿತರಿದ್ದರು. ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಹಾಗೂ ಶಾಸಕರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ ಸ್ವಾಗತಿಸಿದರು. ಶ್ರೀಮತಿ ಕೆ.ಜಿ. ವಿನುತಾ, ಶ್ರೀಮತಿ ರೂಪಾ ಗುರುಪ್ರಸಾದ್ ಪ್ರಾರ್ಥಿಸಿದರು. ಶ್ರೀ ಬಿ. ನಿರಂಜನಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

## ಅಕ್ಷರ ದಾಸೋಹ, ಅನ್ನ ದಾಸೋಹ ಭಾರತೀಯ ಸಂಸ್ಕೃತಿಯ ಪ್ರತೀಕ




ಅಕ್ಷರ ದಾಸೋಹ ಮತ್ತು ಅನ್ನ ದಾಸೋಹ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದೆ ಎಂದು ವಿಶ್ವವಾಣಿ ದಿನಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್‌ರವರು ಹೇಳಿದರು.

ಮಳವಳ್ಳಿಯಲ್ಲಿ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವದಲ್ಲಿ ದಿನಾಂಕ 17.12.2025 ರಂದು ಅವರು ಉಪನ್ಯಾಸ ನೀಡುತ್ತಾ ತಿಳಿಸಿದರು. ಅಕ್ಷರ ಮತ್ತು ಅನ್ನ ದಾಸೋಹವನ್ನು ನಮ್ಮ ದಾರ್ಶನಿಕರು ನೀಡುತ್ತಾ ಬಂದಿದ್ದಾರೆ. ಭಾರತೀಯ ಸಂಸ್ಕೃತಿಯು ಅತ್ಯಂತ ಆದರ್ಶಪ್ರಾಯವಾದುದು. ಸಂಸ್ಕೃತಿಯ ಮೂಲ ತಿರುಳು ನಮ್ಮ ವ್ಯಕ್ತಿತ್ವವನ್ನು ರೂಪಿಸಿದೆ. ಯಾವುದು ಒಳ್ಳೆಯ ಕಾರ್ಯವನ್ನು ಮಾಡುತ್ತದೋ ಅದು ಸಂಸ್ಕೃತಿ ಎಂದು ಕರೆಸಿಕೊಳ್ಳುತ್ತದೆ. ಹಸಿವಾದಾಗ ಸ್ವಾಭಾವಿಕವಾಗಿ ಆಹಾರ ಸೇವನೆ ಮಾಡುತ್ತೇವೆ. ಇದು ಪ್ರಕೃತಿಯ ನಿಯಮ. ಒಬ್ಬರಿಗೆ ಹಸಿವಾದಾಗ ಇನ್ನೊಬ್ಬರ ತಟ್ಟೆಯಿಂದ ಕಿತ್ತುಕೊಳ್ಳುವುದು ವಿಕೃತಿ. ಹಸಿದ ವ್ಯಕ್ತಿಗೆ ಆಹಾರ ನೀಡುವ, ಜೊತೆಗೆ ಹಂಚಿಕೊಂಡು ಉಣ್ಣುವುದು ಸಂಸ್ಕೃತಿ ಎಂದು ಹೇಳಿದರು.

ಜಿಲ್ಲಾಧಿಕಾರಿಗಳಾದ ಡಾ. ಕುಮಾರರವರು ಆದಿ ಜಗದ್ಗುರುಗಳ ಜಯಂತಿ ಮಹೋತ್ಸವ ಸರ್ವ ಸಮಾಜದ ಉತ್ಸವ ಎಂಬ ಆಶಯವನ್ನು ಇಟ್ಟುಕೊಂಡು ಆಚರಣೆ ಮಾಡುತ್ತಿರುವುದು ಸಂತಸ ತಂದಿದೆ. ಸುತ್ತೂರು ಮಠವು ಅಧ್ಯಾತ್ಮದ ಕೇಂದ್ರವಾಗಿ ಸಮಾಜದ ಎಲ್ಲ ಮನಸ್ಸುಗಳನ್ನು ಶುದ್ಧೀಕರಿಸುವ ಕೆಲಸ ಮಾಡುತ್ತಿದೆ ಎಂದರು.

ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗವನ್ನು ಮಾಜಿ ಉಪಸಭಾಪತಿಗಳಾದ ಶ್ರೀ ಮರಿತಿಬ್ಬೇಗೌಡರವರು ಬಿಡುಗಡೆಗೊಳಿಸಿದರು. ದೇವನೂರು ಶ್ರೀಗಳು, ಶ್ರೀ ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮಿಗಳು,

ಕಾಗಿನೆಲೆ ಶಾಖಾಮಠದ ಶ್ರೀ ಶಿವಾನಂದ ಪುರಿ ಸ್ವಾಮಿಗಳು, ಲೋಕಪಾಲ್ ಸದಸ್ಯರಾದ ಗೌ.ನ್ಯಾ. ಶ್ರೀ ಎಲ್. ನಾರಾಯಣಸ್ವಾಮಿ, ಶಾಸಕರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಮಾಜಿ ಸಚಿವರಾದ ಶ್ರೀ ಸಿ.ಎಸ್. ಪುಟ್ಟರಾಜು, ಮಾಜಿ ಶಾಸಕರಾದ ಶ್ರೀ ಕೆ. ಅನ್ನದಾನಿ, ಜಿಲ್ಲಾ ಪಂಚಾಯತ್ ಸಿಇಓ ಶ್ರೀಮತಿ ಕೆ.ಆರ್. ನಂದಿನಿ, ಜಿಲ್ಲಾ ಎಸ್‌ಪಿ ಶ್ರೀ ಮಲ್ಲಿಕಾರ್ಜುನ್ ಬಾಲದಂಡಿ, ಶ್ರೀ ಎಂ. ರಾಮಕೃಷ್ಣ, ಶ್ರೀ ಜಿ. ಮುನಿರಾಜು ಉಪಸ್ಥಿತರಿದ್ದರು. ಶ್ರೀಮತಿ ಎಂ. ಲತಾ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಆರ್.ಪಿ. ಪುಟ್ಟಬುದ್ಧಿ ಸ್ವಾಗತಿಸಿದರು. ಶ್ರೀ ಎಂ.ವಿ.ಟಿ ಕುಮಾರ್ ವಂದಿಸಿದರು. ಶ್ರೀ ಹೆಚ್.ಎಂ. ಶಿವಣ್ಣ ಕಾರ್ಯಕ್ರಮ ನಿರೂಪಿಸಿದರು.

## ಧಾರ್ಮಿಕ ಕಾರ್ಯಕ್ರಮಗಳಿಂದ ಅಸಹಿಷ್ಣುತೆ ದೂರ




ಮಠಮಾನ್ಯಗಳು ಹಮ್ಮಿಕೊಳ್ಳುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಜನರು ಪಾಲ್ಗೊಳ್ಳುವುದರಿಂದ ಸಮಾಜದಲ್ಲಿನ ಅಸಹಿಷ್ಣುತೆಯನ್ನು ಹೋಗಲಾಡಿಸಬಹುದು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶ್ರೀ ಬಿ.ಎಲ್. ಸಂತೋಷ್‌ರವರು ಹೇಳಿದರು.

ಮಳವಳ್ಳಿಯಲ್ಲಿ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವದಲ್ಲಿ ದಿನಾಂಕ 18.12.2025 ರಂದು ಮಾತನಾಡುತ್ತಾ ಅವರು ತಿಳಿಸಿದರು. ಇಂದಿನ ದಿನಮಾನಗಳಲ್ಲಿ ಜನರು ಏಕಾಂಗಿಯಾಗಿ ಬದುಕುವ ಜೀವನಶೈಲಿಯಲ್ಲಿದ್ದಾರೆ. ಶ್ರೀಮಠಗಳು ಹಮ್ಮಿಕೊಳ್ಳುತ್ತಿರುವ ಸತ್ಸಂಗ ಸಮಾರಂಭಗಳು ಜನರಲ್ಲಿ ಭಾವನಾತ್ಮಕ ಸಂಬಂಧಗಳನ್ನು ಬೆಳೆಸಲು ಸಹಕಾರಿಯಾಗುತ್ತವೆ. ಜನರ ಮನದಲ್ಲಿ ವಿಶಾಲ ಮನೋಭಾವ ಮೂಡಿ ನಮ್ಮ ಸಂಸ್ಕೃತಿ ಸಂಪ್ರದಾಯಗಳನ್ನು ಉಳಿಸಲು ಸಾಧ್ಯವಾಗುತ್ತದೆ. ಜಗತ್ತಿನಾದ್ಯಂತ ಧಾರ್ಮಿಕ ಪರಂಪರೆ ಸಂಸ್ಕೃತಿಗಳ ಐತಿಹಾಸಿಕ ಹಿನ್ನೆಲೆಗಳಿರುವುದು ಭಾರತ ಮತ್ತು ಚೀನಾ ದೇಶಗಳಲ್ಲಿ ಮಾತ್ರ. ಇಂತಹ ಪ್ರಾಚೀನ ಪರಂಪರೆಯ ಭಾರತ ದೇಶದಲ್ಲಿ ಯುವ ಸಮೂಹ ಯಾಂತ್ರಿಕ ಜೀವನಶೈಲಿಯನ್ನು ರೂಢಿಸಿಕೊಂಡಿರುವುದು ವಿಪರ್ಯಾಸದ ಸಂಗತಿಯಾಗಿದೆ. ಇಂದಿನ ಕಾಲಘಟ್ಟದಲ್ಲಿ ಭಾವನಾತ್ಮಕ ಮೌಲ್ಯಗಳ ಪರಂಪರೆಯನ್ನು ಉಳಿಸುವ ನಿಟ್ಟಿನಲ್ಲಿ ಧಾರ್ಮಿಕ ಸತ್ಸಂಗ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಹಲವು ಮಠಗಳು ಸಮಾಜಮುಖಿ ಕೆಲಸ ಮಾಡುತ್ತಿವೆ. ಸುತ್ತೂರು ಶ್ರೀಮಠವು ಎಲ್ಲಾ

ಧರ್ಮಗಳನ್ನು ಒಂದುಗೂಡಿಸಿ ಭಾವೈಕ್ಯತೆಯನ್ನು ಸಾರುತ್ತಿದೆ. ವಿವಿಧ ಧರ್ಮ, ಸಮಾಜಗಳಿಗೆ ಸೇರಿದ ಸಮೂಹಗಳು ಶ್ರೀಮಠವನ್ನು ಗೌರವಿಸುತ್ತಿವೆ ಎಂದು ಹೇಳಿದರು.

ಉಡುಪಿಯ ಜಮಾತ್-ಎ-ಇಸ್ಲಾಮಿ ಹಿಂದ್ ಕಾರ್ಯದರ್ಶಿಗಳಾದ ಶ್ರೀ ಅಕ್ಬರ್ ಅಲಿಯವರು ಒಂದು ಸಿದ್ಧಾಂತದಲ್ಲಿ ನಂಬಿಕೆ ಇಟ್ಟುಕೊಂಡು ಎಲ್ಲಾ ಜಾತಿ, ಧರ್ಮಗಳ ಜೊತೆಗೂಡಿ ಸಾಮರಸ್ಯದಿಂದ ಬಾಳುವುದೇ ಭಾವೈಕ್ಯತೆಯ ಸಂಕೇತವಾಗಿದೆ. ನಾಡಿನಲ್ಲಿಂದು ಮಾನವೀಯತೆ ಮೌಲ್ಯ ಕುಸಿಯುತ್ತಿದೆ. ಅನೇಕ ಜನ ವೃದ್ಧಾಪ್ಯದಲ್ಲಿ ಹೆತ್ತ ತಂದೆ ತಾಯಿಯರನ್ನು ನೋಡಿಕೊಳ್ಳದೆ ಮೌಲ್ಯವನ್ನು ಹಾಳು ಮಾಡುತ್ತಿದ್ದಾರೆ. ಬಾಲ್ಯದಿಂದ ತಮ್ಮನ್ನು ಪೋಷಿಸಿದವರನ್ನು ಕಾಪಾಡಿಕೊಳ್ಳಬೇಕಾದ ಜವಾಬ್ದಾರಿಯನ್ನು ಮಕ್ಕಳು ಅರಿತುಕೊಳ್ಳಬೇಕಾಗಿದೆ ಎಂದು ಹೇಳಿದರು.

ಜೆಡಿಎಸ್ ಯುವ ಘಟಕದ ಅಧ್ಯಕ್ಷರಾದ ಶ್ರೀ ನಿಖಿಲ್ ಕುಮಾರಸ್ವಾಮಿಯವರು ಲಕ್ಷಾಂತರ ಬಡ ಕುಟುಂಬದ ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡಿ ಅವರ ಜೀವನವನ್ನು ರೂಪಿಸಿ ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಶ್ರೀ ಮಠಗಳ ಸೇವೆ ಅಪಾರವಾಗಿದೆ. ಲಕ್ಷಾಂತರ ಮಂದಿ ವಿದ್ಯಾರ್ಥಿಗಳಿಗೆ ಅಕ್ಷರ ಮತ್ತು ಅನ್ನ ದಾಸೋಹ ನೀಡುವುದರ ಜೊತೆಗೆ ಆರೋಗ್ಯ ಶಿಬಿರದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಉತ್ತಮ ಸಮಾಜ ನಿರ್ಮಿಸುವಲ್ಲಿ ಸುತ್ತೂರು ಮಠ ಪ್ರಮುಖ ಪಾತ್ರ ವಹಿಸುತ್ತಿದೆ ಎಂದರು.

ಚಲನಚಿತ್ರ ಕಲಾವಿದ ಶ್ರೀ ಶಿವರಾಜ್‌ಕುಮಾರ್‌ರವರು 'ವಿಚಾರ ಲಹರಿ' ಕೃತಿ ಬಿಡುಗಡೆ ಮಾಡಿದರು. ವಾಟಾಳು ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಸಾಲೂರು ಮಠದ ಡಾ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಶಾಸಕರಾದ ಶ್ರೀ ಪಿ.ಎಂ ನರೇಂದ್ರಸ್ವಾಮಿ, ಮಾಜಿ ಸಚಿವರಾದ ಶ್ರೀ ಡಿ.ಸಿ. ತಮ್ಮಣ್ಣ, ಶ್ರೀ ಮುರುಗೇಶ್ ನಿರಾಣಿ, ಮಾಜಿ ಶಾಸಕರಾದ ಡಾ. ಕೆ. ಅನ್ನದಾನಿ, ವಿಧಾನಪರಿಷತ್ ಮಾಜಿ ಸದಸ್ಯರಾದ ಶ್ರೀ ಡಿ.ಎಸ್. ವೀರಯ್ಯ, ಶ್ರೀ ತೋಂಟದಾರ್ಯ, ಕೆಆರ್‌ಐಡಿಎಲ್ ಮಾಜಿ ಅಧ್ಯಕ್ಷರಾದ ಶ್ರೀ ಎಂ. ರುದ್ರೇಶ್, ಉದ್ಯಮಿಗಳಾದ ಶ್ರೀ ಅಮರನಾಥಗೌಡ, ಶ್ರೀ ಎಸ್. ನಿಶಾಂತ್, ಕೆಪಿಎಸ್‌ಸಿ ಸದಸ್ಯರಾದ ಶ್ರೀ ಪ್ರಭುದೇವ್ ಮೊದಲಾದವರು ಉಪಸ್ಥಿತರಿದ್ದರು. ಶ್ರೀಮತಿ ಸುಕನ್ಯಾ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಆರ್.ಎಂ. ಚಂದ್ರಶೇಖರಮೂರ್ತಿ ಸ್ವಾಗತಿಸಿದರು. ಶ್ರೀ ಆರ್.ಎಂ. ಹೇಮಂತ್‌ಕುಮಾರ್ ವಂದಿಸಿದರು. ಶ್ರೀ ಎಂ.ಕೆ. ಸುಂದ್ರಪ್ಪ ಕಾರ್ಯಕ್ರಮ ನಿರೂಪಿಸಿದರು.

## ಅಂತರಂಗದ ಸಮಸ್ಯೆ ಪರಿಹರಿಸಲು ಆಧ್ಯಾತ್ಮಿಕತೆ ಅಗತ್ಯ

ಮನುಷ್ಯನ ಅಂತರಂಗದ ಸಮಸ್ಯೆಗಳನ್ನು ಪರಿಹರಿಸಲು ಆಧ್ಯಾತ್ಮಿಕತೆ ಅಗತ್ಯವಿದೆ ಎಂದು ಶ್ರೀ ಆದಿಚುಂಚನಗಿರಿ ಮಠದ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಹೇಳಿದರು.

ಮಳವಳ್ಳಿಯಲ್ಲಿ ಜರುಗಿದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವದಲ್ಲಿ ದಿನಾಂಕ 19.12.2025 ರಂದು ಮಾತನಾಡುತ್ತಾ ಅವರು ತಿಳಿಸಿದರು. ಆಧುನಿಕ ಯುಗದಲ್ಲಿ ಜ್ಞಾನವಿಲ್ಲವೆಂದಾದರೆ ದಿಕ್ಕು ತಪ್ಪುತ್ತೇವೆ. ವ್ಯಕ್ತಿ ವ್ಯಕ್ತಿಗಳ ಮನಸ್ಸುಗಳನ್ನು ಕೂಡಿಸಬೇಕಾದರೆ ಆಧ್ಯಾತ್ಮಿಕತೆಯ ಅಗತ್ಯವಿದೆ. ಸರ್ಕಾರದಿಂದ ಸಾಧ್ಯವಾಗದ ಮಾನಸಿಕ ಮಾಲಿನ್ಯ ತೊಳೆಯುವ ಕೆಲಸ ಸುತ್ತೂರು ಮಠದಿಂದ ಅದು ಸಾಧ್ಯವಾಗುತ್ತಿದೆ. ಭೌತ ಜಗತ್ತಿನ ಸಮಸ್ಯೆಗಳಿಗೆ ಹಲವು ಪರಿಹಾರಗಳಿವೆ. ಆದರೆ, ಅಂತರಂಗದ ಸಮಸ್ಯೆಗಳನ್ನು ಪರಿಹರಿಸಲು ಆಧ್ಯಾತ್ಮಿಕತೆ ಅಗತ್ಯವಾಗಿ ಬೇಕು. ಆಧ್ಯಾತ್ಮಿಕತೆಯ ಜೊತೆಗೆ ಆಧುನಿಕತೆಯನ್ನು ಅರಿತು



ಸುತ್ತೂರು ಮಠ ವಿಶ್ವದೆಲ್ಲೆಡೆ ಸಂಸ್ಥೆಗಳನ್ನು ತೆರೆದು ಕೆಲಸ ಮಾಡುತ್ತಿದೆ ಎಂದರು.

ರಿಪಬ್ಲಿಕ್ ಕನ್ನಡ ಟಿವಿ ಸಂಪಾದಕರಾದ ಶ್ರೀಮತಿ ಶೋಭಾ ಮಳವಳ್ಳಿಯವರು ಇತ್ತೀಚಿನ ದಿನಗಳಲ್ಲಿ ಕೌಟುಂಬಿಕ ಮನಸ್ತಾಪ ಸಾಮಾಜಿಕ ಜಾಲತಾಣಗಳ ಮೂಲಕ ಬೀದಿಗೆ ಬರುತ್ತಿರುವುದು ಬೇಸರ ತರಿಸುತ್ತಿದೆ. ಮನೆಯಲ್ಲಿ ಅನೇಕ ವ್ಯತ್ಯಾಸಗಳು ಇರುತ್ತವೆ. ಭಾರತೀಯ ಸಂಸ್ಕೃತಿಯಲ್ಲಿ ಕುಟುಂಬದ ಸಾಮರಸ್ಯಕ್ಕೆ ಅದರದೇ ಆದ ಮಹತ್ವ ಇದೆ. ರಾಮಾಯಣ, ಮಹಾಭಾರತಗಳು ಸಾಮರಸ್ಯ ಮೂಡಿಸುವ ಗ್ರಂಥಗಳಾಗಿ ಕುಟುಂಬಕ್ಕೆ ದೊಡ್ಡ ಬಲ ತಂದುಕೊಟ್ಟಿವೆ. ಪಾಂಡವರು ಒಗ್ಗಟ್ಟಿನಿಂದ ಇದ್ದುದರಿಂದ ಗೆಲುವು ಸಾಧಿಸಿದರು. ಅವರಲ್ಲಿ ನಾನೇ ಶ್ರೇಷ್ಠ ಎಂಬ ಭಾವನೆ ಇರಲಿಲ್ಲ. ಕುಟುಂಬದ ಬಲ ದೊಡ್ಡದು ಎಂಬುದನ್ನು ಕೃಷ್ಣ ತೋರಿಸುತ್ತಾನೆ. ಕುಟುಂಬ ಒಡೆಯುವುದಕ್ಕೆ ಶಕುನಿ ಬರುತ್ತಾನೆ. ಆದರೆ, ಪಾಂಡವರ ಪರ ನಿಂತ ಕೃಷ್ಣ ಕುಟುಂಬ ಒಡೆಯಲು ಬಿಡುವುದಿಲ್ಲ. ರಾಮಾಯಣವು ಕುಟುಂಬದ ಸಾಮರಸ್ಯವನ್ನು ತೋರಿಸುತ್ತದೆ. ರಾಮನ ದೇಗುಲದಲ್ಲಿ ರಾಮನ ವಿಗ್ರಹ ಮಾತ್ರ ಇರುವುದಿಲ್ಲ. ಅಲ್ಲಿ ಸೀತಾ, ಲಕ್ಷ್ಮಣ, ಆಂಜನೇಯರ ವಿಗ್ರಹಗಳನ್ನು ಕಾಣುತ್ತೇವೆ. ಶರಣರು ಕೂಡ ಕುಟುಂಬ ಸಾಮರಸ್ಯದ ಬಗ್ಗೆ ವಚನಗಳಲ್ಲಿ ಸಾರಿದ್ದಾರೆ. ಭಾರತದಲ್ಲಿ ಕುಟುಂಬಕ್ಕೆ ದೊಡ್ಡ ಮಹತ್ವ ಇದೆ. ಎಂತಹದೇ ಜಗಳ ಇದ್ದರೂ ಸಂದರ್ಭ ಬಂದಾಗ ಒಂದಾಗಿಬಿಡುತ್ತಾರೆ. ಆದರೆ, ಇತ್ತೀಚೆಗೆ ಕೆಲವು ಮಾಧ್ಯಮಗಳಲ್ಲಿ ಕುಟುಂಬಗಳ ವಿಷಯಗಳನ್ನು ವಿಪರೀತವಾಗಿ ಚರ್ಚೆ ಮಾಡುತ್ತಿರುವುದು ಸಮಾಜದಲ್ಲಿನ ವ್ಯವಸ್ಥೆಯನ್ನು ಎತ್ತಿ ತೋರಿಸುತ್ತಿದೆ. ಮಾಧ್ಯಮಗಳು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಕೌಟುಂಬಿಕ ಜಗಳಗಳಿಗೆ ಕಡಿವಾಣ ಹಾಕಬೇಕಿದೆ ಎಂದರು.

ಕನಕಪುರ ಮರಳೇಗವಿಮಠದ ಶ್ರೀಗಳು, ಲೋಕಾಯುಕ್ತರಾದ ಗೌ.ನ್ಯಾ. ಶ್ರೀ ಬಿ.ಎಸ್. ಪಾಟೀಲ್, ಸಂಸದರಾದ ಡಾ. ಸಿ.ಎನ್. ಮಂಜುನಾಥ್, ಮಾಜಿ ಸಚಿವರಾದ ಶ್ರೀ ಬಿ. ಸೋಮಶೇಖರ್, ಆರಕ್ಷಕ ಪ್ರಾದೇಶಿಕ ಆಯುಕ್ತರಾದ ಶ್ರೀ ನಿತೇಶ್ ಪಾಟೀಲ್, ಉಪಮಹಾನಿರೀಕ್ಷಕರಾದ ಡಾ. ಎಂ.ಬಿ. ಬೋರಲಿಂಗಯ್ಯ, ಚಲನಚಿತ್ರ ಕಲಾವಿದರಾದ ಶ್ರೀ ನೀನಾಸಂ ಸತೀಶ್, ಶ್ರೀ ಎನ್.ಎಸ್. ನಾಗಭೂಷಣ, ಶ್ರೀ ಎಸ್. ಸಚ್ಚಿದಾನಂದ, ಡಾ. ಎನ್.ಎಸ್. ಇಂದ್ರೇಶ್ ಉಪಸ್ಥಿತರಿದ್ದರು. ಶ್ರೀಮತಿ ಪಂಕಜ ಪ್ರಾರ್ಥಿಸಿದರು. ಶ್ರೀಮತಿ ಯಶೋಧಮ್ಮ ಸ್ವಾಗತಿಸಿದರು. ಶ್ರೀ ಎಂ.ಎಸ್. ಶ್ರೀಕಂಠಸ್ವಾಮಿ ವಂದಿಸಿದರು. ಶ್ರೀ ಬಬ್ರುವಾಹನ ಕಾರ್ಯಕ್ರಮ ನಿರೂಪಿಸಿದರು.

## ಸತ್ಕಾರ್ಯಗಳನ್ನು ಸದಾ ಮಾಡುತ್ತಿರಬೇಕು

ಭೂಮಿಯ ಮೇಲೆ ಇರುವಷ್ಟು ದಿನ ನಾವುಗಳು ಸಮಾಜಕ್ಕೆ ಒಳಿತಾಗುವ ಸತ್ಕಾರ್ಯಗಳನ್ನು ಮಾಡಬೇಕು ಎಂದು ಕೊಪ್ಪಳ ಶ್ರೀ ಗವಿಮಠದ ಜಗದ್ಗುರು ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಹೇಳಿದರು.

ಮಳವಳ್ಳಿಯಲ್ಲಿ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವದಲ್ಲಿ ದಿನಾಂಕ 20.12.2025 ರಂದು ಮಾತನಾಡುತ್ತಾ ಅವರು ತಿಳಿಸಿದರು. ಸಾವಿನ ನಂತರವೂ ನೆನಪು ಉಳಿದುಕೊಳ್ಳುವಂತಹ ಬದುಕು ನಡೆಸಬೇಕು. ಭೂಮಿಯಲ್ಲಿ ಹುಟ್ಟಿದ ಯಾವುದೇ ವ್ಯಕ್ತಿಯ ಶರೀರ, ಸಿರಿ, ಸಂಪತ್ತು ಸೇರಿದಂತೆ ಯಾವುದೇ ಸಂಬಂಧಗಳು ಕ್ರಮೇಣ ಕರಗಿ ಹೋಗುತ್ತವೆ. ನಮ್ಮದು ಎಂಬುದು ಏನೂ ಉಳಿಯದು. ಜಗತ್ತಿನಲ್ಲಿ ನಮ್ಮ ಎಲ್ಲಾ ಇಚ್ಛೆಗಳು ನೆರವೇರುವುದಿಲ್ಲ. ದೈವೇಚ್ಛೆಯಿಂದ ಜೀವನ ಸಾಗಲಿದೆ. ಹಣ, ಆಸ್ತಿ, ಸಂಪತ್ತು ಎಷ್ಟೇ ಇದ್ದರೂ ಕೂಡ ಒಂದಲ್ಲಾ ಒಂದು ಚಿಂತೆಯಲ್ಲಿಯೇ ಮನುಷ್ಯರು ಬದುಕು ಸಾಗಿಸುತ್ತಿರುವ ಪ್ರಸ್ತುತ ದಿನಮಾನಗಳಲ್ಲಿ ಎದೆಯೊಳಗೆ ಸಂತೋಷ ಇರುವವನೇ ಯಶಸ್ವಿ ಪುರುಷ ಎನ್ನುವ ಸತ್ಯವನ್ನು ಅರಿತು ಬದುಕಬೇಕು. ಊರ ಮುಂದಿನ ಬಾವಿಯನ್ನು ಮುಚ್ಚಬಹುದು. ಆದರೆ, ಊರ ಮಂದಿಯ ಬಾಯಿ ಮುಚ್ಚಿಸಲು ಸಾಧ್ಯವಾಗದು. ಮಾನವ ಇಚ್ಛೆ ಪಡುವುದು ತಪ್ಪಲ್ಲ. ಇಚ್ಛಿಸಿದ್ದೆಲ್ಲ ಸಿಗಬೇಕೆಂಬುದು ಸರಿಯಲ್ಲ. ಹಾಗಾಗಿಯೇ ಕರ್ಮವನ್ನು ನೀನು ಮಾಡು, ಫಲಾಫಲ ನನಗೆ ಬಿಡು ಎಂದು ಶ್ರೀಕೃಷ್ಣ ಹೇಳಿರುವಂತೆ ನೀವು ಒಳ್ಳೆಯ ಕೆಲಸಗಳನ್ನು ಮಾಡಿ ಅದರ ಫಲಾಫಲಗಳನ್ನು ಭಗವಂತನಿಗೆ ಬಿಡಬೇಕು. ದೀಪವೇ ಇಲ್ಲದ ಗುಡಿಸಲಿನಲ್ಲಿ ವಿದ್ಯೆ ಎಂಬ ದೀಪ ಹಚ್ಚಿ ಬೆಳಕು ನೀಡುವುದರ ಜೊತೆಗೆ ಬಡವರ ಮಕ್ಕಳಿಗೆ ಅರಿವಿನ ಮನೆ ಕಟ್ಟಿದ ಸುತ್ತೂರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ಸಮಾಜದಲ್ಲಿ ಶಾಶ್ವತ ದೇವರಾಗಿ ಉಳಿದಿದ್ದಾರೆ. ಏನೂ ಮಾಡದ ಮನುಷ್ಯ ದೀಪ ಆರಿಸಿ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಾನೆ. ಆದರೆ, ಶತಶತಮಾನಗಳ ಹಿಂದೆ ಅಜ್ಞಾನವನ್ನು ಹೋಗಲಾಡಿಸಲು ಜ್ಞಾನ ನೀಡಿ ಹಸಿದ ಹೊಟ್ಟೆಗೆ ಅನ್ನ ನೀಡಿದ ಶ್ರೀಗಳವರ ಹುಟ್ಟುಹಬ್ಬವನ್ನು ನಿತ್ಯ ಕಾರ್ತಿಕೋತ್ಸವವಾಗಿ ಆಚರಿಸಲಾಗುತ್ತಿದೆ. ಪಂಚಭೂತಗಳಿಂದ ನಿರ್ಮಿತ ಗೊಂಡಿರುವ ದೇಹ ಬರುವುದು, ಬಡಿದಾಡುವುದು, ಹೋಗುವುದು ಆದರೆ ಬದುಕು ಮೂರು ದಿನಗಳ ಜಾತ್ರೆಯಷ್ಟೇ ಅಲ್ಲ. ಎನ್ನುವ ಸತ್ಯವನ್ನು ಎದೆಯೊಳಗೆ ಇಟ್ಟುಕೊಂಡು ಸಮಾಜಕ್ಕೆ ಕೊಡುಗೆ ನೀಡಿರುವ ಶ್ರೀ ಶಿವರಾತ್ರೀಶ್ವರ ಜಯಂತ್ಯುತ್ಸವನ್ನು ಮಳವಳ್ಳಿಯಲ್ಲಿ ಆಚರಿಸಲಾಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು.

ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಜಗದ್ಗುರು ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮಿಗಳು ಹತ್ತನೇ ಶತಮಾನದಲ್ಲಿ ಧಾರ್ಮಿಕ ಪ್ರಜ್ಞೆ ವಿಸ್ತರಿಸುವ ಮೂಲಕ ಭಾರತೀಯ ಸಂಸ್ಕೃತಿಯನ್ನು ಸುಧಾರಿಸುವಲ್ಲಿ ಸುತ್ತೂರು ಶ್ರೀಮಠ ಪ್ರಮುಖ ಪಾತ್ರ ವಹಿಸಿರುತ್ತದೆ. ಧರ್ಮ, ಸಂಸ್ಕೃತಿ, ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಅಧ್ಯಾತ್ಮಿಕ ಪ್ರಭಾವ ನಿರ್ಮಾಣ ಮಾಡಿ ಸುತ್ತೂರು ಶ್ರೀಮಠದ ಪರಂಪರೆಯ ಎಲ್ಲ ಗುರುಗಳು ಕಾರ್ಯನಿರ್ವಹಿಸಿದ್ದಾರೆ. ಈ ಪರಂಪರೆಯನ್ನು ಮತ್ತಷ್ಟು ಉಜ್ವಲವಾಗಿ ಬೆಳಗುವಂತೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರು ಮುನ್ನಡೆಸುತ್ತಾ ಬರುತ್ತಿದ್ದಾರೆ ಎಂದರು.


ಸಚಿವರಾದ ಶ್ರೀ ಈಶ್ವರ್ ಬಿ. ಖಂಡ್ರೆಯವರು ಮಠಗಳು ಹಾಗೂ ಸ್ವಾಮಿಗಳವರಿಂದ ಸಮಾಜ ಸುಸಂಸ್ಕೃತವಾಗಿದೆ. ನವಕರ್ನಾಟಕ ನಿರ್ಮಾಣದ ಕಾರ್ಯದಲ್ಲಿ ಎಲ್ಲ ಗುರುಗಳೂ ಅವರದೇ ಆದ ಕೊಡುಗೆಯನ್ನು ನೀಡುತ್ತಿದ್ದಾರೆ. ಕಳೆದ 33 ವರ್ಷಗಳಿಂದ ಬೇರೆ ಬೇರೆ ಕಡೆಗಳಲ್ಲಿ ಶ್ರೀ ಶಿವರಾತ್ರೀಶ್ವರರ ಜಯಂತ್ಯುತ್ಸವ ನಡೆಯುತ್ತಿದೆ. ದೇಶಕ್ಕೆ ಮೊದಲು ಬೆಳಕು ನೀಡಿದ ಮಳವಳ್ಳಿ ಕ್ಷೇತ್ರದಲ್ಲಿ ಇದೊಂದು ಅದ್ಭುತ ಕಾರ್ಯಕ್ರಮವಾಗಿ

ರೂಪುಗೊಂಡಿದೆ. ನಾಡಿನ ಯುವ ಸಮೂಹಕ್ಕೆ ಇತಿಹಾಸ ತಿಳಿಸುವ ನಿಟ್ಟಿನಲ್ಲಿ ಇಂಥ ಕಾರ್ಯಕ್ರಮಗಳಿಂದ ಪ್ರೇರಣೆ ಸಿಗಬೇಕು ಎನ್ನುವ ದೃಷ್ಟಿಯಿಂದ ಜಯಂತ್ಯುತ್ಸವ ನಡೆಯುತ್ತಿದೆ. ಸುತ್ತೂರು ಮಠಕ್ಕೆ ಅದರದೇ ಆದ ಇತಿಹಾಸ ಹಾಗೂ ಪರಂಪರೆ ಇದೆ. ಶ್ರೀಗಳು ಸಮಾಜಕ್ಕಾಗಿ ಮಾಡಿರುವ ಸೇವೆ ಅನನ್ಯ, ಶ್ರೀಮಠವು ನೊಂದ ಬೆಂದು ಬಸವಳಿದ ಅನೇಕರಿಗೆ ದಾರಿ ದೀಪವಾಗಿದೆ ಎಂದರು.

ಶಾಸಕರು ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ತಮ್ಮ ಜೀವಿತಾವಧಿಯಲ್ಲಿ ಸಮಾಜದ ಸುಧಾರಣೆಗೆ ಶ್ರಮಿಸಿದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಸೇವೆ ಅನನ್ಯ. ಸುತ್ತೂರು ಮಠ ಬಡವರಿಗೆ ಆಶ್ರಯ ನೀಡುವ ಕೆಲಸ ಮಾಡಿಕೊಂಡು ಬಂದಿದೆ. ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಕಾರ್ಯವನ್ನು ಹಾಗೂ ಈ ಮಠದ ಮಹತ್ವವನ್ನು ಜಗತ್ತಿಗೆ ಪರಿಚಯಿಸುವ ಕೆಲಸವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಮಾಡುತ್ತಿದ್ದಾರೆ ಎಂದರು.

ಶಾಸಕರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಶ್ರೀ ಎಚ್.ಟಿ. ಮಂಜು, ವಿಧಾನಪರಿಷತ್ ಮಾಜಿ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷರಾದ ಶ್ರೀ ಶಂಕರ ಮಹದೇವ ಬಿದರಿ, ಮಾಜಿ ಶಾಸಕರಾದ ಡಾ. ಕೆ. ಅನ್ನದಾನಿ, ಶ್ರೀ ಸಿ.ಎಸ್. ನಿರಂಜನ್ ಕುಮಾರ್, ಶ್ರೀಮತಿ ನಾಗಮಣಿ ನಾಗೇಗೌಡ ಉಪಸ್ಥಿತರಿದ್ದರು. ಶ್ರೀ ಡಿ.ಎಂ. ಮಹಂತದೇವರು ಪ್ರಾರ್ಥಿಸಿದರು. ಶ್ರೀ ಕೆ.ಎಸ್. ಆನಂದ ಸ್ವಾಗತಿಸಿದರು. ಶ್ರೀ ಜಯಶಂಕರ್ ವಂದಿಸಿದರು. ಶ್ರೀ ಅಂಬರೀಶ್ ಕಾರ್ಯಕ್ರಮ ನಿರೂಪಿಸಿದರು.

## ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು



ಜೀವನದಲ್ಲಿ ಎಲ್ಲರೂ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಮಳವಳ್ಳಿಯಲ್ಲಿ ದಿನಾಂಕ 21.12.2025 ರಂದು ನಡೆದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಯಂತಿ ಮಹೋತ್ಸವದ ಸಮಾರೋಪದ ದಿವ್ಯ ಸಾನ್ನಿಧ್ಯ ವಹಿಸಿ ಪರಮಪೂಜ್ಯರು ಆಶೀರ್ವಚನ ನೀಡಿದರು. ಜಯಂತಿ ಬಹಳ ಅಭೂತಪೂರ್ವವಾಗಿ ನೆರವೇರಿದೆ. ಒಂದು ತಾಲೂಕು ಕೇಂದ್ರಕ್ಕೆ ದೇಶದ ಪ್ರಥಮ ಪ್ರಜೆಗಳಾದ ರಾಷ್ಟ್ರಪತಿಯವರೇ ಬಂದಿದ್ದು ಎಲ್ಲರಿಗೂ ಅತೀವ ಸಂತಸ ತಂದಿದೆ. ಹತ್ತನೇ ಶತಮಾನದಲ್ಲಿ ನಾಡಿನಲ್ಲಿ ಶಾಂತಿ, ಪ್ರೀತಿ, ಸೌಹಾರ್ದ ಸಾರಿದ ಮಹಾನ್ ಸಂತರು ಶ್ರೀ ಶಿವರಾತ್ರೀಶ್ವರರು. ಆದಿ ಜಗದ್ಗುರುಗಳು

ನಾಡಿನ ಜನರ ಹಿತಕ್ಕಾಗಿ ಕ್ರಿಯಾಶೀಲವಾಗಿ ನಿರಂತರವಾಗಿ ಶ್ರಮಿಸಿದರು. ಇಂತಹ ಮಹನೀಯರು ಸಾರಿದ ಸದ್ಭಾವನೆ, ಚಿಂತನೆ, ಮಾನವೀಯ ಮೌಲ್ಯಗಳನ್ನು ಪ್ರತಿಯೊಬ್ಬರೂ ರೂಢಿಸಿಕೊಳ್ಳಬೇಕು. ಜಯಂತ್ಯುತ್ಸವದ ಎಲ್ಲ ಕಾರ್ಯಕ್ರಮಗಳಿಗೆ ಆರಂಭದ ದಿನಗಳಿಂದ ಕೊನೆ ಕ್ಷಣದವರೆಗೂ ಭಕ್ತರು, ಸಾರ್ವಜನಿಕರು ಸಾಗರೋಪಾದಿಯಾಗಿ ಬಂದಿದ್ದು, ಮನಸ್ಸು ತುಂಬಿ ಬಂದಿದೆ ಎಂದರು.

ತುಮಕೂರು ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ನಾಡಿನಲ್ಲಿ ಶಾಂತಿ, ಸೌಹಾರ್ದದ ಸಂದೇಶ ಸಾರಿದ್ದರು. ತಂತ್ರಜ್ಞಾನ, ವಿಜ್ಞಾನ ಬೆಳೆದಂತೆ ಇಂದು ಶಾಂತಿ ನೆಮ್ಮದಿ ಇಲ್ಲದಂತಾಗಿದೆ. ಯುವಕರು ಮನಸ್ಸಿನೊಳಗೆ ಶಾಂತಿ ನೆಮ್ಮದಿ ಸೃಷ್ಟಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು. ಸಂತರು ಕೆಲವೇ ವ್ಯಕ್ತಿಗಳಿಗೆ ಸೀಮಿತರಾಗದೇ ಎಲ್ಲರ ಬದುಕಿನ ಅಭಿವೃದ್ಧಿಗಾಗಿ ಶ್ರಮಿಸಿದರು. ಸಾವಿರಾರು ವರ್ಷಗಳಿಂದ ಶ್ರೇಷ್ಠ ಗುರು ಪರಂಪರೆಯನ್ನು ಸುತ್ತೂರು ಶ್ರೀಮಠ ಮುಂದುವರೆಸಿಕೊಂಡು ಬಂದಿದೆ. ಇಂತಹ ಪ್ರಕೃತಿಯ ಮಡಿಲಿನಲ್ಲಿ ಜಯಂತ್ಯುತ್ಸವ ನೆರವೇರಿದ್ದು ಶ್ಲಾಘನೀಯ ಎಂದರು.

ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಸೂಫಿಗಳು, ಸಮಾಜ ಸುಧಾರಕರು, ಶಿವಯೋಗಿಗಳು ಸಮಾಜ ಸುಧಾರಣೆಗಾಗಿ ಮುಖ್ಯವಾದ ಪಂಕ್ತಿಯಲ್ಲಿ ಕೆಲಸ ಮಾಡಿದ್ದಾರೆ. ಸಮಾಜದಲ್ಲಿ ಅನೇಕ ಧರ್ಮ ಜಾತಿಗಳಿದ್ದು, ಅಸಮಾನತೆಯಿಂದಾಗಿ ಶಾಂತಿ ನೆಲೆಸಲು ಸಾಧ್ಯವಾಗಿಲ್ಲ. ಧರ್ಮಗಳು ಪ್ರೀತಿ ಕರುಣೆ ತೋರಿಸಿ ಎಂದು ಹೇಳಿವೆಯೇ ಹೊರತು ದ್ವೇಷ ಮಾಡಿ ಎಂದು ಹೇಳಿಲ್ಲ. ನಿಜ ಶರಣರಾದ ಬಸವಣ್ಣನವರು ಸಾವಿರಾರು ವರ್ಷಗಳ ಹಿಂದೆ ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ ಎಂದರು. ಆದರೂ ಇಷ್ಟು ವರ್ಷಗಳು ಕಳೆದರೂ ಜಾತಿ ವ್ಯವಸ್ಥೆ ಕಡಿಮೆ ಆಗಿಲ್ಲ. ಕುವೆಂಪು ಅವರ ಕರೆಯಂತೆ ನಾಡು ಸರ್ವಜನಾಂಗದ ಶಾಂತಿಯ ತೋಟವಾಗಬೇಕು. ಮನುಷ್ಯ ಧರ್ಮ ನಿರ್ಮಾಣವಾಗಬೇಕು. ನಾವುಗಳು ಪ್ರಾಣಿಗಳನ್ನು ಪ್ರೀತಿಸುತ್ತೇವೆ. ಆದರೆ, ನಮ್ಮ ಸುತ್ತಲೂ ವಾಸಿಸುವ ಮನುಷ್ಯನನ್ನು ದ್ವೇಷಿಸುವ ಪರಿಸ್ಥಿತಿ ಇದೆ. ಸಮಸಮಾಜ ನಿರ್ಮಾಣ ಆಗಬಾರದು ಎಂದು ದ್ವೇಷ ಬಿತ್ತುವ ದುಷ್ಟಶಕ್ತಿಗಳಿವೆ. ಅವುಗಳನ್ನು ಗುರುತಿಸಿ ದಮನಮಾಡಬೇಕಾದ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದು ಹೇಳಿದರು.

ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಬೆಳ್ಳಿಪಲ್ಲಕ್ಕಿ ಉತ್ಸವವು ಶ್ರೀಮಠದ ಸಕಲ ಬಿರುದಾವಳಿಗಳು, ಮಂಗಳವಾದ್ಯ ಹಾಗೂ ಜನಪದ ಕಲಾತಂಡಗಳೊಂದಿಗೆ ಅನುಭವಮಂಟಪದಿಂದ ಹೊರಟು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಜರುಗಿತು.

ಕನಕಪುರ ಶ್ರೀ ದೇಗುಲಮಠದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು, ಶ್ರೀ ಚನ್ನಬಸವ ಸ್ವಾಮಿಗಳು, ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿ, ಡಾ. ಹೆಚ್.ಸಿ. ಮಹದೇವಪ್ಪ, ಶಾಸಕರಾದ ಶ್ರೀ ಎ.ಬಿ. ರಮೇಶ್‌ಬಾಬು ಬಂಡಿಸಿದ್ದೇಗೌಡ, ಶ್ರೀ ಪಿ. ರವಿಕುಮಾರ್, ಶ್ರೀ ಕೆ.ಎಂ. ಉದಯ್, ಶ್ರೀ ಹೆಚ್.ಎಂ. ಗಣೇಶ್ ಪ್ರಸಾದ್, ವಿಧಾನಪರಿಷತ್ ಸದಸ್ಯರಾದ ಶ್ರೀ ಮಧು ಜಿ ಮಾದೇಗೌಡ, ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಕೆ ವಿವೇಕಾನಂದ, ಮಾಜಿ ಉಪಸಭಾಪತಿಗಳಾದ ಶ್ರೀ ಮರಿತಿಬ್ಬೇಗೌಡ, ಮಾಜಿ ಶಾಸಕರಾದ ಶ್ರೀಮತಿ ಮಲ್ಲಾಜಮ್ಮ, ಮೈ ಶುಗರ್ ಸಕ್ಕರೆ ಕಾರ್ಖಾನೆ ಅಧ್ಯಕ್ಷರಾದ ಶ್ರೀ ಸಿ.ಡಿ. ಗಂಗಾಧರ್, ಕಾಡಾ ಅಧ್ಯಕ್ಷರಾದ ಶ್ರೀ ಪಿ. ಮರಿಸ್ವಾಮಿ, ಮುಡಾ ಅಧ್ಯಕ್ಷರಾದ ಶ್ರೀ ಬಿ.ಪಿ. ಪ್ರಕಾಶ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಸ್. ಶಿವಣ್ಣ, ಮನ್‌ಮುಲ್ ಅಧ್ಯಕ್ಷರಾದ ಶ್ರೀ ಶಿವಕುಮಾರ್, ನಿರ್ದೇಶಕರಾದ ಶ್ರೀ ಡಿ. ಕೃಷ್ಣೇಗೌಡ, ಶ್ರೀಮತಿ ವಿಜಯಲಕ್ಷ್ಮೀ, ಶ್ರೀ ಎಂ.ಎನ್. ಸುರೇಶ್ ಉಪಸ್ಥಿತರಿದ್ದರು. ಶಾಸಕರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ ಸ್ವಾಗತಿಸಿದರು. ಶ್ರೀಮತಿ ಕೆ.ಜಿ. ವಿನುತಾ ಮತ್ತು ಶ್ರೀಮತಿ ರೂಪಾ ಗುರುಪ್ರಸಾದ್ ಪ್ರಾರ್ಥಿಸಿದರು. ಶ್ರೀ ಆರ್.ಎನ್. ವಿಶ್ವಾಸ್ ಕಾರ್ಯಕ್ರಮ ನಿರೂಪಿಸಿದರು.

## ಸಂತರ ಭವ್ಯ ಪರಂಪರೆ ಹೊಂದಿದ ದೇಶ ಭಾರತ



ಭಾರತ ಸಾಧು ಸಂತರ ಭವ್ಯ ಪರಂಪರೆಯನ್ನು ಹೊಂದಿರುವ, ಅಧ್ಯಾತ್ಮಿಕತೆ ತುಂಬಿರುವ ದೇಶವಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಹನೂರಿನಲ್ಲಿ ದಿನಾಂಕ 13.12.2025ರಂದು ನಡೆದ ರಾಜೇಂದ್ರ ಶ್ರೀಗಳವರ 110ನೇ ಜಯಂತಿ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಪರಮಪೂಜ್ಯರು ಆಶೀರ್ವಚನ ನೀಡಿದರು. ಈ ದೇಶದ ಪ್ರತಿಯೊಬ್ಬ ಪ್ರಜೆಯಲ್ಲೂ ಸಹ ಧಾರ್ಮಿಕತೆ ತುಂಬಿ ತುಳುಕುತ್ತಿದೆ. ಜಗತ್ತನ್ನು ಸೃಷ್ಟಿ ಮಾಡಿದ ಭಗವಂತನ ಮೇಲೆ ಅಪಾರವಾದ ಭಕ್ತಿ ಇದೆ. ಇಡೀ ದೇಶದಲ್ಲಿ ಕಣ್ಣಿಗೆ ಕಾಣುವ ಅನೇಕ ವೈಜ್ಞಾನಿಕ ಸಂಶೋಧನೆಗಳನ್ನು ವಿಜ್ಞಾನಿಗಳು ಮಾಡಿದರೆ ಅಂತರಂಗದ ಸಂಶೋಧನೆಯನ್ನು ಸಾಧು ಸಂತರು ಮಾಡಿದ್ದಾರೆ. ರಾಜೇಂದ್ರ ಶ್ರೀಗಳು ಲೋಕಕಲ್ಯಾಣಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಂಡರು. ಆಯಾಯ ಕಾಲಮಾನಕ್ಕೆ ಬೇಕಾದಂತಹ ವ್ಯವಸ್ಥೆಗಳನ್ನು ನಾಡಿನುದ್ದಕ್ಕೂ ಮಠಮಾನ್ಯಗಳು ಮಾಡುತ್ತಲೇ ಬಂದಿವೆ. ಸುತ್ತೂರು ಮಠ, ಸಿದ್ದಗಂಗಾ ಮಠ ಹಾಗೂ ಇನ್ನಿತರ ಮಠಗಳು ಸಮಾಜದ ಉನ್ನತಿಗಾಗಿ ಶ್ರಮಿಸುತ್ತಿರುವ ಮಠಗಳಾಗಿವೆ. ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ರಾಜೇಂದ್ರ ಶ್ರೀಗಳು ಸೌಲಭ್ಯಗಳೇ ಇಲ್ಲದಂತಹ ದಿನಮಾನಗಳಲ್ಲಿ ಪ್ರಸಾದನಿಲಯಗಳು ಮತ್ತು ಶಾಲೆಗಳನ್ನು ತೆರೆದು ಶಿಕ್ಷಣವನ್ನು ಕೊಟ್ಟಂತಹ ಮಹಾನ್ ತ್ಯಾಗಿಗಳು ಎಂದರು.

ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಮಹಾತ್ಮರು ತೋರಿಸಿರುವ ಮಾರ್ಗ ನಮ್ಮ ಬದುಕಿಗೆ ಯಾವಾಗಲು ಬೆಳಕಾಗಿದೆ ಎಂದರೆ ತಪ್ಪಾಗಲಾರದು. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕ್ರಾಂತಿ ಉಂಟುಮಾಡಿದ ಸಂಸ್ಥೆಗಳಲ್ಲಿ ಜೆಎಸ್‌ಎಸ್ ಸಂಸ್ಥೆ ಮೊದಲ ಸಾಲಿನಲ್ಲಿ ಇರುತ್ತದೆ. ಶ್ರೀ ರಾಜೇಂದ್ರ ಮಹಾಸ್ವಾಮಿಗಳು ಅತ್ಯಂತ ಮೃದು ಸ್ವಭಾವಿಗಳಾಗಿದ್ದರು. ಅವರು ಈ ನಾಡಿಗೆ ಕಷ್ಟದ ಹಾದಿಯಲ್ಲಿ ನಡೆದು ಬೆಳಕನ್ನು ಕೊಟ್ಟವರು. ಪರೋಪಕಾರಕ್ಕಾಗಿ ಹುಟ್ಟಿದ ಮಹಾತ್ಮರು. ಅವರು ಹಾಕಿ ಕೊಟ್ಟಂತಹ ಮಾರ್ಗದಲ್ಲಿ ಎಲ್ಲರೂ ನಡೆದುಕೊಂಡು ಹೋಗಬೇಕಾಗಿದೆ ಎಂದರು.

ದೇವನೂರು, ಸಾಲೂರುಮಠ, ಮರಳೇಗವಿಮಠ ಹಾಗೂ ಶ್ರೀ ಭಗಿರಥ ಉಪ್ಪಾರ ಪೀಠದ ಶ್ರೀಗಳು, ಶ್ರೀ ಎಂ.ಆರ್. ಮಂಜುನಾಥ್, ಶ್ರೀಮತಿ ಪರಿಮಳ ನಾಗಪ್ಪ, ಶ್ರೀ ಬಾಲರಾಜು, ಶ್ರೀ ಎನ್. ಮಹೇಶ್, ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ಶ್ರೀ ಆರ್. ನರೇಂದ್ರ, ಶ್ರೀ ಎಸ್. ನಿಶಾಂತ್, ಡಾ. ದತ್ತೇಶ್‌ಕುಮಾರ್, ಶ್ರೀ ಜನಧ್ವನಿ ವೆಂಕಟೇಶ್ ಮೊದಲಾದವರು ಉಪಸ್ಥಿತರಿದ್ದರು.

# ಬೋಧಕರಿಗೆ ಬೋಧನಾ ಸಾಮರ್ಥ್ಯವೃದ್ಧಿ ಅತ್ಯಾವಶ್ಯಕ




ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ 'ಅಧ್ಯಾಪಕರ ಸಾಮರ್ಥ್ಯವೃದ್ಧಿ' ವಿಷಯವನ್ನು ಕುರಿತ ಕಾರ್ಯಾಗಾರವನ್ನು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎಂ.ಆರ್. ಗಂಗಾಧರ್‌ರವರು ಉದ್ಘಾಟಿಸುತ್ತಿರುವುದು. (2 ಡಿಸೆಂಬರ್ 2025 )

ಅಧ್ಯಾಪಕರು ಜೀವನಪರ್ಯಂತ ಕಲಿಕಾರ್ಥಿಗಳು. ಇಂದಿನ ಬದಲಾದ ಶೈಕ್ಷಣಿಕ ಪ್ರಪಂಚದಲ್ಲಿ ಅಧ್ಯಾಪಕರ ಬೋಧನಾ ಸಾಮರ್ಥ್ಯ ವೃದ್ಧಿ ಬಹಳ ಅವಶ್ಯಕವಾದದ್ದು. ಹೊಸ ವಿಷಯಗಳ ತಿಳುವಳಿಕೆಯಿಂದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಕೊಡಲು ಸಾಧ್ಯವಾಗುತ್ತದೆ ಎಂದು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎಂ.ಆರ್. ಗಂಗಾಧರ್‌ರವರು ಅಭಿಪ್ರಾಯಪಟ್ಟರು.

**ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 2.12.2025 ರಂದು ಆಂತರಿಕ ಗುಣಮಟ್ಟ ಖಾತರಿ ಸಮಿತಿ ವತಿಯಿಂದ ಅಧ್ಯಾಪಕರಿಗೆ ಆಯೋಜಿಸಲಾಗಿದ್ದ 'ಅಧ್ಯಾಪಕರ ಸಾಮರ್ಥ್ಯವೃದ್ಧಿ' ಎಂಬ ವಿಷಯವನ್ನು ಕುರಿತ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳ ಪ್ರಸ್ತುತ ಅವಶ್ಯಕತೆಗಳನ್ನು ಪೂರೈಸುವ ನಿಟ್ಟಿನಲ್ಲಿ ಅಧ್ಯಾಪಕರಾದ ನಾವು ನಮ್ಮನ್ನು ಅಭಿವೃದ್ಧಿಪಡಿಸಿಕೊಳ್ಳಬೇಕಾಗಿದೆ. ಚಾಮರಾಜನಗರ ವಿಶ್ವವಿದ್ಯಾನಿಲಯವು ಎಸಿಟಿ ಉಪಕರಣಗಳು ಮತ್ತು ಕಲಿಕಾ ಉಪಕರಣಗಳನ್ನು ಹೊಂದಿದ್ದು ನಮ್ಮ ವಿದ್ಯಾರ್ಥಿಗಳಿಗೆ ಪ್ರಸ್ತುತ ಜಾಗತಿಕ ಪ್ರಪಂಚದ ಜೊತೆ ಸ್ಪರ್ಧಿಸಲು ಅನುಕೂಲವಾಗುವಂತೆ ಬೋಧನೆ ಮಾಡಲಾಗುತ್ತಿದೆ. ಜೆಎಸ್‌ಎಸ್ ಆಡಳಿತ ಮಂಡಳಿಯು ಇತರ ಸಂಸ್ಥೆಗಳ ಸಹಯೋಗದೊಂದಿಗೆ ಅಧ್ಯಾಪಕರ ಅಭಿವೃದ್ಧಿಗೆ ಉತ್ತಮ ಅವಕಾಶಗಳನ್ನು ಕಲ್ಪಿಸುತ್ತಿದೆ. ಅಧ್ಯಾಪಕರು ಪ್ರಾಯೋಗಿಕ ತರಬೇತಿಯಿಂದ ಜ್ಞಾನವನ್ನು ಪಡೆಯಬೇಕಾಗಿದೆ. ಸರ್ಕಾರವು ಭಾರತೀಯ ಜ್ಞಾನ ಪದ್ಧತಿಯನ್ನು ಪರಿಚಯಿಸುವುದರೊಂದಿಗೆ ಪ್ರತಿ ಎರಡು ತಿಂಗಳಿಗೆ 10,000 ಶಿಷ್ಯವೇತನವನ್ನು ಕೊಡುವುದರ ಮುಖಾಂತರ ಅಧ್ಯಾಪಕರಿಗೆ ವಿವಿಧ ವಿಷಯಗಳ ಬಗ್ಗೆ ಪ್ರಾಯೋಗಿಕ ತರಬೇತಿಯನ್ನು ನೀಡುತ್ತಿದೆ. ವಿದ್ಯಾರ್ಥಿಗಳನ್ನು ಉತ್ತೃಷ್ಟಗೊಳಿಸಲು ಅಧ್ಯಾಪಕರು ಮತ್ತು ಶಿಕ್ಷಣ ಸಂಸ್ಥೆ ಸಂಘಟನಾತ್ಮಕ ಜವಾಬ್ದಾರಿಗಳನ್ನು ನಿರ್ವಹಿಸುವುದರೊಂದಿಗೆ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಬೇಕಾಗಿದೆ. ಅಧ್ಯಾಪಕರು ತಮ್ಮನ್ನು ಆಧುನೀಕರಿಸಿಕೊಳ್ಳುವುದರೊಂದಿಗೆ ವಿದ್ಯಾರ್ಥಿಗಳ ಸಬಲೀಕರಣಕ್ಕೆ ಶ್ರಮಿಸಬೇಕಾಗಿದೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್. ಮಹದೇವಸ್ವಾಮಿಯವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, 21ನೇ ಶತಮಾನ ಜ್ಞಾನಯುಗವಾಗಿದೆ. ಈ ಜ್ಞಾನಯುಗದಲ್ಲಿ ಶಿಕ್ಷಣ ಮತ್ತು ಬೋಧನೆ ಗಂಭೀರವಾದ ವಿಷಯಗಳಾಗಿವೆ. ಬದಲಾದ ಕಾಲಘಟ್ಟಗಳಲ್ಲಿ ಮತ್ತು ಕೃತಕ ಬುದ್ಧಿಮತ್ತೆ ಸಂಧಿಕಾಲದಲ್ಲಿ ನಮ್ಮ ಬೋಧನಾ ಕೌಶಲ್ಯಗಳನ್ನು ಪುನರ್‌ಶೋಧಿಸಿಕೊಂಡು ಪರಿಣಾಮಕಾರಿಯಾಗಿ ಬೋಧಿಸುವ ಸನ್ನಿವೇಶ ನಿರ್ಮಾಣವಾಗಿದೆ. ಕಲಿಸುವುದು ಮತ್ತು ಕಲಿಕೆ ಎರಡೂ ಬಹಳ ಮುಖ್ಯವಾಗಿದೆ. ವಿದ್ಯಾರ್ಥಿ ಕೇಂದ್ರಿತ ಬೋಧನೆಯಲ್ಲಿ ಅಧ್ಯಾಪಕರುಗಳಿಗೆ ಹೇಗೆ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂಬ ಸವಾಲುಗಳಿವೆ. ವಿದ್ಯಾರ್ಥಿಗಳಿಗೆ ಬೋಧನೆಯಲ್ಲಿ ಹೊಸ ಹೊಸ ಸಂಗತಿಗಳು ಎದುರಾಗುತ್ತಿವೆ. ಇಂದು ಭಾರತೀಯ ಜ್ಞಾನ ಪರಂಪರೆ ಜಗತ್ತಿನ ಗಮನವನ್ನು ಸೆಳೆಯುತ್ತಿದೆ. ಈ ನಿಟ್ಟಿನಲ್ಲಿ ಚಾಮರಾಜನಗರ ವಿಶ್ವವಿದ್ಯಾನಿಲಯವು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪಠ್ಯಕ್ರಮದಲ್ಲಿ ಭಾರತೀಯ ಜ್ಞಾನ ಪರಂಪರೆಯನ್ನು ಅಳವಡಿಸಿಕೊಳ್ಳಬೇಕಿದೆ ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಮೈಸೂರಿನ ಐಎಂಪಿಎಸಿಟಿ – ಟೀಚರ್‌ಕ್ರಾಫ್ಟ್‌ನ ವಿಶ್ರಾಂತ ಪ್ರಾಧ್ಯಾಪಕರೂ, ಸಂಸ್ಥಾಪಕರೂ ಮತ್ತು ಶೈಕ್ಷಣಿಕ ನಿರ್ದೇಶಕರೂ ಆದ ಡಾ. ಎಚ್.ಎನ್. ವಿಶ್ವನಾಥ್‌ರವರು ಮಾತನಾಡುತ್ತಾ ನಿರಂತರವಾದ ವೃತ್ತಿಪರ ಸಾಮರ್ಥ್ಯ ಬೆಳವಣಿಗೆಯು ಜ್ಞಾನ ಮತ್ತು ಕೌಶಲ್ಯಗಳ ನಿರಂತರ ವಿಸ್ತರಣೆಯಾಗಿದೆ. ಶಿಕ್ಷಣ ನೀತಿಯ ಮುಖ್ಯ ಉದ್ದೇಶ ಉನ್ನತ ಶಿಕ್ಷಣದಲ್ಲಿ ಕೌಶಲ್ಯಾಧಾರಿತ ತರಬೇತಿ ಮತ್ತು ಕೃತಕ ಬುದ್ಧಿಮತ್ತೆ ಆಧಾರಿತ ವೈಯಕ್ತಿಕ ಕಲಿಕೆಯನ್ನು ವೃದ್ಧಿಸುವುದಾಗಿದೆ ಮತ್ತು ವೃತ್ತಿಪರ ತರಬೇತಿಗೆ ಹೆಚ್ಚಿನ ಆದ್ಯತೆ ನೀಡುವುದಾಗಿದೆ. ಶಿಕ್ಷಣವನ್ನು ಉತ್ತೇಜಿಸಲು ಡಿಜಿಟಲ್ ಮೂಲಸೌಕರ್ಯಗಳನ್ನು ವಿಸ್ತರಿಸಲಾಗುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಅಧ್ಯಕ್ಷೀಯ ನುಡಿಗಳನ್ನಾಡುತ್ತಾ, ಚಾಮರಾಜನಗರ ವಿಶ್ವವಿದ್ಯಾನಿಲಯ ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠ ಇವೆರಡಕ್ಕೂ ಈ ಜಿಲ್ಲೆಯ ಶೈಕ್ಷಣಿಕ ಅಭಿವೃದ್ಧಿಯ ಸಂದರ್ಭದಲ್ಲಿ ಒಂದು ವಿಶೇಷವಾದ ಜವಾಬ್ದಾರಿಯಿದೆ. ವರ್ತಮಾನದಲ್ಲಿ ನಾವು ಹೇಗಿದ್ದೇವೆ? ನಮ್ಮ ಸಾಧನೆಗಳೇನು? ವಿದ್ಯಾರ್ಥಿಗಳನ್ನು ನಾವು ಹೇಗೆ ರೂಪಿಸುತ್ತಿದ್ದೇವೆ? ಎಂಬುದನ್ನು ನಾವು ಪ್ರಶ್ನಿಸಿಕೊಳ್ಳ ಬೇಕಾಗಿದೆ. ನಾವು ವಿದ್ಯಾರ್ಥಿಯಾಗಿದ್ದ ಸಂದರ್ಭದ ಜ್ಞಾನಜಗತ್ತಿಗೂ ವರ್ತಮಾನದ ಜ್ಞಾನಜಗತ್ತಿಗೂ ತುಂಬಾ ವ್ಯತ್ಯಾಸವಿದೆ. ಸಾಕಷ್ಟು ಅಭಿವೃದ್ಧಿಗಳಾಗಿವೆ, ಬದಲಾವಣೆ ಗಳಾಗಿವೆ, ಸಾಕಷ್ಟು ಸೂಕ್ಷ್ಮಗಳು ನಮ್ಮ ಇಡೀ ಸಮಾಜವನ್ನು ಆವರಿಸಿಕೊಂಡಿವೆ. ಹಾಗೆ ನೋಡಿದರೆ ಶಿಕ್ಷಣ ಎನ್ನುವುದು ವರ್ತಮಾನದ ಸಂದರ್ಭದಲ್ಲಿ ಬಹಳಷ್ಟು ಸಮಸ್ಯೆಗಳಿಗೆ ಉತ್ತರವನ್ನು ಕೊಡಬೇಕಾಗಿದೆ. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಎಂತಹ ಅಧ್ಯಾಪಕರು ಬೇಕಾಗಿದ್ದಾರೆ ಎಂದರೆ ಇಂದು ಬೇರೆಯದೇ ಆದ ಅಮಲಿನ ಜಗತ್ತಿನಲ್ಲಿ ವಿದ್ಯಾರ್ಥಿಗಳಿದ್ದಾರೆ. ಈ ಅಮಲಿನ ಜಗತ್ತಿನಿಂದ ಆರೋಗ್ಯಕರ ಪ್ರಪಂಚಕ್ಕೆ ಕರೆದುಕೊಂಡು ಬರಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸಾಮರ್ಥ್ಯ ಅಭಿವೃದ್ಧಿಯ ಕಾರ್ಯಕ್ರಮ ನಮ್ಮನ್ನು ಹಾಲು ಕುಡಿಸುವ ತಂದೆಯಾಗಿ ರೂಪಿಸುವ ಹಿನ್ನೆಲೆಯಲ್ಲಿ ಆಯೋಜನೆಗೊಂಡಿದೆ. ವಿದ್ಯಾರ್ಥಿಗಳ

ಸಾಧನೆ ತಮ್ಮ ಪರಿಶ್ರಮದ ಫಲ ಎಂದು ಹೆಮ್ಮೆಪಡುವಂತೆ ಅಧ್ಯಾಪಕರು ವಿದ್ಯಾರ್ಥಿಗಳನ್ನು ರೂಪಿಸಬೇಕಾಗಿದೆ. ಇವೆಲ್ಲವೂ ಸಾಧ್ಯವಾಗಬೇಕಾದರೆ ಅಧ್ಯಾಪಕರು ಬೇರೆ ಬೇರೆ ಬಗೆಯ ಕೌಶಲ್ಯಗಳ, ಸತ್ವಗಳ, ಸಾಮರ್ಥ್ಯಗಳ ಜೊತೆಯಲ್ಲಿ ಅನುಸಂಧಾನ ನಡೆಸಬೇಕಾಗಿದೆ. ಆಲೋಚನೆಗಳೇನೋ ಉನ್ನತವಾಗಿವೆ, ಸ್ವೀಕರಿಸುವ ಮನಸ್ಸುಗಳಿಲ್ಲದಿದ್ದರೆ ಅದು ಸಾಧ್ಯವಾಗುವುದಿಲ್ಲ. ನೀವು ಸ್ವೀಕರಿಸಲು ಮುಂದೆ ಬಂದಿದ್ದೀರಿ. ಇದು ನಿಮ್ಮ ಹೃದಯ ಶ್ರೀಮಂತಿಕೆಯ ಪ್ರತೀಕ. ಹೃದಯ ಶ್ರೀಮಂತಿಕೆಯಿದ್ದಾಗ ಏನನ್ನಾದರೂ ಸಾಧಿಸಬಹುದು. ಒಂದು ಅತ್ಯುತ್ತಮವಾದ ಭವಿಷ್ಯವನ್ನು ಕಟ್ಟಿಕೊಳ್ಳುವುದಕ್ಕೆ ಇದು ಸಾಧ್ಯವಾಗುತ್ತದೆ. ಇಂದಿನ ಈ ಕಾರ್ಯಕ್ರಮ ಎಲ್ಲಾ ಸಾಧ್ಯತೆಗಳನ್ನು ತಮಗೆ ತಂದುಕೊಡಲಿ ಎಂದು ಆಶಿಸುತ್ತೇನೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ದ್ವಿತೀಯ ಬಿಬಿಎ ವಿದ್ಯಾರ್ಥಿನಿ ಕು. ತಸ್ಲೀಮ್ ಪ್ರಾರ್ಥಿಸಿದರು. ಕಾರ್ಯಕ್ರಮದ ಸಂಯೋಜಕರು ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥರಾದ ಶ್ರೀ ಹೆಚ್.ಜಿ. ನಟರಾಜನ್ ಸ್ವಾಗತಿಸಿದರು. ಆಂತರಿಕ ಗುಣಮಟ್ಟ ಖಾತರಿ ಸಮಿತಿಯ ಸಂಚಾಲಕರಾದ ಶ್ರೀ ಮಲ್ಲಿಕಾರ್ಜುನಸ್ವಾಮಿ ವಂದಿಸಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಆರ್. ಉಮೇಶ್ ಕಾರ್ಯಕ್ರಮವನ್ನು ನಿರೂಪಿಸಿದರು. ಸಮುಚ್ಚಯದ ಶಿಕ್ಷಣ ಸಂಸ್ಥೆಗಳ ಅಧ್ಯಾಪಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ವಿಚಾರಗೋಷ್ಠಿಗಳಲ್ಲಿ ಪ್ರೊ. ವೆೊರಬದ ಮಲ್ಲಿಕಾರ್ಜುನರವರು "ವೃತ್ತಿಪರ ನೈತಿಕತೆ" ಎಂಬ ವಿಷಯವನ್ನು ಕುರಿತು, ಡಾ. ಎಚ್.ಎನ್. ವಿಶ್ವನಾಥ್‌ರವರು "ಸಿನಾಪ್ಟಿಕ್ ಲಿಂಕೇಜ್ ಇನ್‌ಸ್ಟ್ರಕ್ಷನಲ್ ಮಾಡೆಲ್ (ಎಸ್‌ಎಲ್‌ಐಎಂ)" ಮತ್ತು "ರಿ ಡಿಸ್ಕವರ್ ಯುವರ್ ಸೆಲ್ಫ್" ಎಂಬ ವಿಷಯಗಳನ್ನು ಕುರಿತು ಮಾತನಾಡಿದರು.

ಸಮಾರೋಪ ಸಮಾರಂಭದಲ್ಲಿ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಕೆ.ಸಿ. ಬಸವಣ್ಣನವರು ಮಾತನಾಡುತ್ತಾ ಅಧ್ಯಾಪಕರುಗಳಿಗೆ ಇಂಥ ಕಾರ್ಯಾಗಾರಗಳು ತುಂಬಾ ಅವಶ್ಯಕತೆ ಇದೆ. ಬೋಧನೆಯನ್ನು ಪರಿಣಾಮಕಾರಿಯಾಗಿಸಿಕೊಳ್ಳಲು ಕಾರ್ಯಾಗಾರಗಳು ನಡೆಯಬೇಕೆಂದು ತಿಳಿಸಿದರು.


ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ. ಎನ್. ಮಹದೇವಸ್ವಾಮಿಯವರು ನಮ್ಮ ಬೋಧನೆಯಲ್ಲಿ ಭಾವನಾತ್ಮಕತೆ ಇದ್ದಾಗ ಬೋಧನೆ ಪರಿಣಾಮಕಾರಿಯಾಗಿರುತ್ತದೆ. ಅಧ್ಯಾಪಕನಿಗೆ ಫ್ಯಾಶನ್ ಇದ್ದರೆ ನಮ್ಮ ವೃತ್ತಿ ಬದುಕನ್ನು ಸುಂದರವಾಗಿಸಿಕೊಳ್ಳಲು ಸಾಧ್ಯ. ವಿದ್ಯಾರ್ಥಿಕೇಂದ್ರಿತ ಬೋಧನೆ ನಿಮ್ಮದಾಗಿದ್ದರೆ ಉತ್ತಮ ಅಧ್ಯಾಪಕರಾಗುವಿರಿ. ಅಧ್ಯಾಪಕರಾಗಲು ಪೂರಕವಾದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಮತ್ತು ಸನ್ನಿವೇಶವನ್ನು ಸೃಷ್ಟಿಸಿಕೊಳ್ಳಬೇಕು. ಆದರೆ ಬೋಧನೆಯನ್ನು ವ್ಯಾಪಾರಿ ಸಂಸ್ಕೃತಿಯನ್ನಾಗಿ ಮಾಡಬಾರದೆಂದು ತಿಳಿಸಿದರು.

ಗುರುವೆಂದರಿಯರು, ಹಿರಿಯರೆಂದರಿಯರು;
ದೇವರೆಂದರಿಯರು, ಭಕ್ತರೆಂದರಿಯರು;
ಲಿಂಗವೆಂದರಿಯರು, ಜಂಗಮವೆಂದರಿಯರು;
ಬಂದ ಬರವನರಿಯರು, ನಿಂದ ನಿಲವನರಿಯರು
ಶಿವಶರಣರ ನೋಯಿಸುವ ಪಾತಕರನೇನೆಂಬೆ ?
ಗುಹೇಶ್ವರಾ, ನಿಮ್ಮ ಮನ ನೊಂದ ನೋವು
ಬರಿದೆ ಹೋಗದು

**ಅಲ್ಲಮಪ್ರಭುದೇವರು**

## ಶಾಲಾ ವಾರ್ಷಿಕೋತ್ಸವ

### ಜೆಎಸ್‌ಎಸ್ ಪ್ರೌಢಶಾಲೆ, ಬನ್ನಿಮಂಟಪ, ಮೈಸೂರು



**ಮೈಸೂರಿನ ಬನ್ನಿಮಂಟಪದಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯ** ಶಾಲಾ ವಾರ್ಷಿಕೋತ್ಸವವು ದಿನಾಂಕ 31.12.2025ರಂದು ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯದ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ನೆರವೇರಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿಗಳಾದ ಶ್ರೀ ನಗರ್ಲೆ ಶಿವಕುಮಾರರವರು 'ಹೊಂಗಿರಣ' ಶಾಲಾ ವಾರ್ಷಿಕ ಸಂಚಿಕೆಯನ್ನು ಬಿಡುಗಡೆ ಮಾಡಿ ಮಾತನಾಡುತ್ತಾ, ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು, ಸಮಯಪಾಲನೆ, ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡು ಕಠಿಣ ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡಬೇಕು ಹಾಗೂ ಮಹಾಪುರುಷರ ಜೀವನ ಚರಿತ್ರೆಗಳನ್ನು ಓದಿ ಅವರ ಆದರ್ಶಗಳನ್ನು ಪಾಲಿಸಬೇಕು. ವಿದ್ಯಾರ್ಥಿಗಳು ನಿರ್ದಿಷ್ಟ ಗುರಿಯನ್ನು ಇಟ್ಟುಕೊಂಡು ಉನ್ನತ ವ್ಯಾಸಂಗ ಮಾಡಿ ಉತ್ತಮ ಸಮಾಜ ನಿರ್ಮಾಣ ಮಾಡಬೇಕೆಂದು ಕರೆ ನೀಡಿದರು.

ವಾರ್ಷಿಕೋತ್ಸವದ ಪ್ರಯುಕ್ತ ಶಾಲೆಯಲ್ಲಿ ಏರ್ಪಡಿಸಿದ್ದ ವಿವಿಧ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಪ್ರಮೋದ್‌ಕುಮಾರ್‌ರವರು ಬಹುಮಾನ ವಿತರಿಸಿ ಮಾತನಾಡುತ್ತಾ, ವಿದ್ಯಾರ್ಥಿಗಳು ಕನ್ನಡ ಮಾಧ್ಯಮಲ್ಲಿ ವ್ಯಾಸಂಗ ಮಾಡುತ್ತಿರುವುದಕ್ಕೆ ಹೆಮ್ಮೆ ಪಡಬೇಕು. ಸತತ ಪ್ರಯತ್ನದಿಂದ ಮುನ್ನಡೆದರೆ ಉತ್ತಮ ಸಾಧನೆ ಮಾಡಬಹುದು. ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ಓದಿ ವಿವಿಧ ಉನ್ನತ ಹುದ್ದೆಗಳಲ್ಲಿರುವ ವ್ಯಕ್ತಿಗಳನ್ನು ಉದಾಹರಣೆಯಾಗಿ ಇಟ್ಟುಕೊಂಡು ಅಭ್ಯಾಸ ಮಾಡಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಆರ್. ಸತೀಶ್‌ಚಂದ್ರರವರು ವಿದ್ಯಾರ್ಥಿಗಳು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು

ಕಾಪಾಡಿಕೊಳ್ಳಬೇಕು, ಇದಕ್ಕಾಗಿ ಪ್ರತಿನಿತ್ಯ ಉತ್ತಮ ಆಹಾರ, ಧ್ಯಾನ, ಯೋಗ, ಪ್ರಾರ್ಥನೆ ಮಾಡಬೇಕು. ಜೀವನದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಶಿಸ್ತನ್ನು ಪಾಲಿಸಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ವ್ಯವಸ್ಥಾಪಕರಾದ ಶ್ರೀಮತಿ ಸಿ. ಚೇತನಾರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಶಾಲಾ ಮುಖ್ಯೋಪಾಧ್ಯಾಯನಿ ಶ್ರೀಮತಿ ಕೆ.ವಿ. ದಾಕ್ಷಾಯಿಣಿಯವರು ಸ್ವಾಗತಿಸಿದರು. ಕು. ಪ್ರೀತಿ ಮತ್ತು ತಂಡದವರು ಪ್ರಾರ್ಥಿಸಿದರು. ಕು. ನಾಸಿರಬಾನು ವಂದಿಸಿದರು. ಕು. ನಿಮಿತ ಮತ್ತು ಕು. ಹರ್ಷಿತ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ಬಾಗೆ




ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವದಲ್ಲಿ ಇಸ್ರೋದ ಮಾಜಿ ಅಧ್ಯಕ್ಷರಾದ ಡಾ. ಎ.ಎಸ್. ಕಿರಣ್‌ಕುಮಾರ್‌ರವರು ಮಾತನಾಡುತ್ತಿರುವುದು. (20 ಡಿಸೆಂಬರ್ 2025 )

**ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ** ದಿನಾಂಕ 20.12.2025ರಂದು ಶಾಲಾ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಇಸ್ರೋ ಮಾಜಿ ಅಧ್ಯಕ್ಷರಾದ ಡಾ. ಎ.ಎಸ್. ಕಿರಣ್‌ಕುಮಾರ್‌ರವರು ಮಾತನಾಡುತ್ತಾ ಇಸ್ರೋ ಭಾರತದ ಹೆಮ್ಮೆಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಾಗಿದೆ. ಉಪಗ್ರಹಗಳ ಮೂಲಕ ಚಂಡಮಾರುತಗಳು ಯಾವಾಗ ಬರುತ್ತವೆ ಎಂಬುದನ್ನು ಗುರುತಿಸಬಹುದು ಮತ್ತು ಮೀನುಗಳ ಆಹಾರ ಸರಪಳಿಯನ್ನು ಗಮನಿಸಬಹುದು. ಭಾರತವು ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಬೆಳೆಯುತ್ತಿದ್ದು ಉಪಗ್ರಹ ತಂತ್ರಜ್ಞಾನ ಬಹಳ ಅಭಿವೃದ್ಧಿಯಾಗಿದೆ. 1973ರಲ್ಲಿ ಅಮೇರಿಕಾದ ಉಪಗ್ರಹ ತಂತ್ರಜ್ಞಾನವನ್ನು ಭಾರತ ಅಳವಡಿಸಿಕೊಂಡಿತು ಎಂದರು.

ಕೋವಿಡ್–19 ಸಮಯದಲ್ಲಿ ಮಕ್ಕಳು ಸೂಕ್ಷ್ಮಾಣುಗಳ ಬಗ್ಗೆ ತಿಳಿದುಕೊಂಡರು. ಮಕ್ಕಳು ತಮ್ಮದೇ ಅನುಭವಗಳಿಂದ ಉತ್ತಮವಾಗಿ ಕಲಿಯುತ್ತಾರೆ. ಜಗತ್ತಿನಲ್ಲಿ ಹೇಗೆ ಬದುಕಬೇಕು ಎಂಬುದನ್ನು ಅರಿತುಕೊಳ್ಳುತ್ತಾರೆ. ಇಂದು ಪೂರಕ ಶಿಕ್ಷಣ ವ್ಯವಸ್ಥೆ ಇದ್ದು ಇಲ್ಲಿ ಮಕ್ಕಳು

ಹಾಗೂ ಶಿಕ್ಷಕರು ಇಬ್ಬರೂ ಕಲಿಯುತ್ತಾರೆ. ಮಕ್ಕಳ ಶಿಕ್ಷಣದಲ್ಲಿ ಪೋಷಕರ ಪಾತ್ರ ಬಹಳ ಮಹತ್ವದ್ದಾಗಿದೆ. ಜೆಎಸ್‌ಎಸ್‌ನಂತಹ ಸಂಸ್ಥೆಗಳು ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಕ್ಕೆ ತಮ್ಮದೇ ಆದ ಅಮೋಘ ಕೊಡುಗೆಯನ್ನು ನೀಡುತ್ತಿವೆ ಎಂದರು.

ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ ನಿರ್ದೇಶಕರಾದ ಶ್ರೀ ಕೆ.ಆರ್. ಸಂತಾನಂರವರು ಮಾತನಾಡಿ, ಗುಣಾತ್ಮಕ ಶಿಕ್ಷಣ ನೀಡುತ್ತಿರುವ ಜೆಎಸ್‌ಎಸ್ ಸಂಸ್ಥೆಯ ಕಾರ್ಯ ಶ್ಲಾಘನೀಯವಾದದ್ದು. ಇಲ್ಲಿ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಒತ್ತು ನೀಡಿರುವುದು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿ. ಸುಂದರವಾದ ಪ್ರಕೃತಿ ತಾಣದಲ್ಲಿ ನಿರ್ಮಿತವಾಗಿರುವ ಈ ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಅದೃಷ್ಟವಂತರು ಎಂದು ತಿಳಿಸಿದರು.

ಉಪಪ್ರಾಂಶುಪಾಲರಾದ ಶ್ರೀ ಎಸ್. ಯೋಗೇಶ್ 2025–26ನೇ ಶೈಕ್ಷಣಿಕ ಸಾಲಿನ ಶಾಲಾ ವಾರ್ಷಿಕ ವರದಿಯನ್ನು ಮಂಡಿಸಿದರು. 2024–25 ನೇ ಶೈಕ್ಷಣಿಕ ಸಾಲಿನಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಕು. ಸಾನಿಕ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಆರುಷ್ ಸ್ವಾಗತಿಸಿದರು. ಕು. ಫಾತಿಮಾ ಜೋಯಾ ಅತಿಥಿಗಳನ್ನು ಪರಿಚಯಿಸಿದರು. ಕು. ಜಿ.ಡಿ. ಲಿಖಿತ್ ಪಟೇಲ್ ವಂದಿಸಿದರು ಹಾಗೂ ಕು. ನೈಲಾ ಅಬ್ದುಲ್ ಮುನಫ್ ಮತ್ತು ಕು. ಸೋಹನ್ ಬಿ. ಶ್ರೀಚರಣ್ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ಸಿದ್ದಾರ್ಥನಗರ, ಮೈಸೂರು

**ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ** ದಿನಾಂಕ 23.12.2025ರಂದು ಶಾಲಾ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾದ ಡಾ. ಕೆ. ಆನಂತರಾಮುರವರು ಮಾತನಾಡುತ್ತಾ, ಈ ಶಾಲೆಯ ವಿದ್ಯಾರ್ಥಿಗಳು ಅತ್ಯಂತ ಪ್ರತಿಭಾವಂತರಾಗಿದ್ದು, ಹಲವು ಬಹುಮಾನಗಳನ್ನು ಸ್ವೀಕರಿಸಿರುವುದು ಸಂತಸದ ವಿಷಯ. ಶಾಲೆಯ ವಾತಾವರಣವು ಮಕ್ಕಳಿಗೆ ಪೂರಕವಾಗಿದ್ದು, ಕೇವಲ ಪರೀಕ್ಷೆಯ ದೃಷ್ಟಿಯಿಂದ ಓದದೇ ಜ್ಞಾನಾರ್ಜನೆಯನ್ನು ಮೂಲ ಗುರಿಯನ್ನಾಗಿ ಮಾಡಿಕೊಳ್ಳಬೇಕು. ಅಂಕಗಳೇ ಮಾಪನದ ಮಾನದಂಡವಲ್ಲ. ಶೀಲವಿಲ್ಲದ ಶಿಕ್ಷಣ ಅಪರಾಧಕ್ಕೆ ಸಮವಾದುದು. ಪೋಷಕರು ಮಕ್ಕಳ ವರ್ತನೆಯ ಕಡೆಗೆ ಗಮನವಹಿಸಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ಜಿಲ್ಲಾ ಆರಕ್ಷಕ ಅಧೀಕ್ಷಕರಾದ ಶ್ರೀ ಎನ್. ವಿಷ್ಣುವರ್ಧನರವರು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಾಧನೆಗೈದ ಮಕ್ಕಳಿಗೆ ಪ್ರಶಸ್ತಿ ಪ್ರದಾನಮಾಡಿ ಮಾತನಾಡುತ್ತಾ, ಇಂದಿನ ದಿನಮಾನಗಳಲ್ಲಿ ಸೈಬರ್ ಕ್ರೈಂ ಹೆಚ್ಚಾಗುತ್ತಿದ್ದು, ಯುವ ಸಮುದಾಯ ಇದಕ್ಕೆ ತುತ್ತಾಗುತ್ತಿರುವುದು ವಿಷಾದನೀಯ. ಡ್ರಗ್ಸ್‌ನಂತಹ ಮಾದಕವಸ್ತುಗಳಿಗೆ ವಿದ್ಯಾರ್ಥಿಗಳು ಒಳಗಾಗುತ್ತಿದ್ದಾರೆ. ಮೊಬೈಲ್ ದುರ್ಬಳಕೆ ಹೆಚ್ಚಾಗುತ್ತಿದೆ. ಪೋಷಕರು ಈ ವಿಚಾರಗಳಲ್ಲಿ ಜಾಗ್ರತೆ ವಹಿಸುವುದರೊಂದಿಗೆ ಸಾತ್ವಿಕ ಜಾಗೃತಿ ಮೂಡಿಸಬೇಕಿದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್‌ರವರು ಮಾತನಾಡಿ ಮಕ್ಕಳಿಗೆ ವಿದ್ಯೆಯಷ್ಟೇ



ಬುದ್ಧಿಯು ಮುಖ್ಯ. ವಿವೇಕ ಮನುಷ್ಯನಿಗೆ ಅತ್ಯಮೂಲ್ಯವಾದದ್ದು. ಸಂಸ್ಕೃತಿ, ಸಂಸ್ಕಾರ, ವಿನಯ, ವಿಧೇಯತೆ, ಹಿರಿಯರಲ್ಲಿ ಗೌರವ ಭಾವನೆ ಇವುಗಳನ್ನು ಮಕ್ಕಳಲ್ಲಿ ವೃದ್ಧಿಸುವಲ್ಲಿ ಶಿಕ್ಷಕರಷ್ಟೇ ಜವಾಬ್ದಾರಿ ಪೋಷಕರಿಗೂ ಇದೆ. ಜೊತೆಗೆ ಪೋಷಕರು ಮಾತೃಭಾಷೆಯಾದ ಕನ್ನಡಕ್ಕೆ ಹೆಚ್ಚು ಪ್ರಾತಿನಿಧ್ಯವನ್ನು ನೀಡಿ ಮಕ್ಕಳನ್ನು ಪ್ರೋತ್ಸಾಹಿಸಬೇಕೆಂದು ತಿಳಿಸಿದರು.

2025–26ನೇ ಸಾಲಿನ ವಾರ್ಷಿಕ ಶಾಲಾ ವರದಿಯನ್ನು ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಬಿ. ಲತಾರವರು, ವಿವಿಧ ಕಾರ್ಯಕ್ರಮದ ವರದಿಯನ್ನು ಕು. ಎಸ್. ಶಿಂಷಾರವರು ಮತ್ತು ಕ್ರೀಡಾ ವರದಿಯನ್ನು ಕು. ಎಂ.ಎಸ್. ಮನ್ವಿತ ಮಂಡಿಸಿದರು.

ಶಾಲೆಯ ಉಪ ಪ್ರಾಂಶುಪಾಲರಾದ ಶ್ರೀ ಎಸ್.ಎಲ್. ನಾಗೇಂದ್ರರವರು ಉಪಸ್ಥಿತರಿದ್ದರು.

ಕು. ಸಾನ್ವಿ ಬಿ. ರಾಜ್, ಕು. ಸಿ. ಶ್ರವಂತಿ, ಕು. ಸಾಕ್ಷಿ ಎಸ್. ನಾಯಕ್, ಕು. ಈಶ ಎಸ್. ಕಶ್ಯಪ್, ಕು. ಎಸ್. ತ್ರಿಷಾ ಹಾಗೂ ಕು. ಎಸ್. ಅಮೂಲ್ಯ ಕಾರ್ಯಕ್ರಮವನ್ನು ನಿರೂಪಿಸಿದರು. ಜಿ. ದರ್ಶನ್ ಕವಾಡ್‌ರವರು ವಂದಿಸಿದರು.

**ಜೆಎಸ್‌ಎಸ್ ವಾರ್ತಾಪತ್ರಕ್ಕೆ ಕಳುಹಿಸುವ**
**ವರದಿಗಳು ಮತ್ತು ಛಾಯಚಿತ್ರಗಳನ್ನು ಕಡ್ಡಾಯವಾಗಿ**
**varthapathra@jssonline.org ಗೆ ಮಾತ್ರ ಕಳುಹಿಸುವುದು.**
**ಬೇರೆ ಯಾವುದೇ ಇಮೇಲ್‌ಗೆ ಕಳುಹಿಸಬಾರದು.**

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**
**ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು**
**ದೂರವಾಣಿ : 8861654566, 9964161363**
**9663151846, 9480771995**

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯ, ಮೈಸೂರು




ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಶಾಲಾ ವಾರ್ಷಿಕೋತ್ಸವವನ್ನು ಹಿರಿಯ ಪತ್ರಕರ್ತರಾದ ಶ್ರೀ ಅಂಶಿ ಪ್ರಸನ್ನಕುಮಾರ್‌ರವರು ಉದ್ಘಾಟಿಸುತ್ತಿರುವುದು. (30 ಡಿಸೆಂಬರ್ 2025)

**ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ** ಶಾಲಾ ವಾರ್ಷಿಕೋತ್ಸವವನ್ನು ದಿನಾಂಕ 30.12.2025ರಂದು ಕಲಾಮಂದಿರದಲ್ಲಿ ಆಚರಿಸಲಾಯಿತು.

ಹಿರಿಯ ಪತ್ರಕರ್ತರಾದ ಶ್ರೀ ಅಂಶಿ ಪ್ರಸನ್ನಕುಮಾರ್‌ರವರು ಮಾತನಾಡಿ ಶಿಕ್ಷಣದಿಂದ ಸಮಾಜದ ಬದಲಾವಣೆ ಸಾಧ್ಯ. ಭಾರತೀಯ ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಜೆಎಸ್‌ಎಸ್ ಸಂಸ್ಥೆಯು ಸಮಾಜಮುಖಿಯಾಗಿ ಕರ್ತವ್ಯ ನಿರ್ವಹಿಸುತ್ತಿದೆ. ವಿದ್ಯಾರ್ಥಿಗಳು ಸಾಧಕರ ಆದರ್ಶಗಳನ್ನು ಮೈಗೂಡಿಸಿಕೊಂಡು ಸತ್ಪ್ರಜೆಗಳಾಗಬೇಕೆಂದು ಕರೆಕೊಟ್ಟರು.

ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಆಡಳಿತಾಧಿಕಾರಿಗಳಾದ ಡಾ. ಟಿ.ಸಿ. ಪೂರ್ಣಿಮಾರವರು, ವಿದ್ಯಾರ್ಥಿಗಳು ಮೊಬೈಲ್ ನೋಡುವ ಚಾಳಿಯನ್ನು ಬಿಡಬೇಕು. ವ್ಯಾಸಂಗದಲ್ಲಿ ತಮ್ಮನ್ನು ತೊಡಗಿಸಿಕೊಂಡು ಉನ್ನತವಾದ ಸಾಧನೆಗೈಯ್ಯಬೇಕು. ಕರುಣೆ, ಸ್ನೇಹ, ಪ್ರೀತಿ, ಸತ್ಯ, ಸಹಿಷ್ಣುತೆಯುಳ್ಳ ಉತ್ತಮ ನಾಗರಿಕರಾಗಬೇಕೆಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ಸಹ ನಿರ್ದೇಶಕರಾದ ಶ್ರೀ ಶಿವಮಾದಪ್ಪನವರು ವಿದ್ಯಾಭ್ಯಾಸವು ಉತ್ತಮ ವ್ಯಕ್ತಿತ್ವವನ್ನು ರೂಪಿಸುವುದಲ್ಲದೆ ಸಮಾಜದಲ್ಲಿ ಗೌರವ, ಪದವಿ, ಸ್ಥಾನಮಾನಗಳನ್ನು ಗಳಿಸಿಕೊಡುತ್ತದೆ ಎಂದು ತಿಳಿಸಿದರು.

ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಕೆ.ಬಿ. ಸುಮಾರವರು ಶಾಲೆಯ ಶೈಕ್ಷಣಿಕ ವರದಿಯನ್ನು ಮಂಡಿಸಿದರು. "ಸಂಪ್ರೇರಣ" ಎಂಬ ಶೀರ್ಷಿಕೆ ಅಡಿಯಲ್ಲಿ ನಾಟಕ, ನೃತ್ಯ, ಸಮೂಹ ಗಾಯನ, ಯೋಗ ಮೊದಲಾದ ಕಾರ್ಯಕ್ರಮಗಳು ಜರುಗಿದವು.

## ವಿದ್ಯಾರ್ಥಿಗಳ ಮನೋವಿಕಾಸಕ್ಕೆ ರಂಗಭೂಮಿ ಪೂರಕ




ಶಿಕ್ಷಣದಲ್ಲಿ ರಂಗಭೂಮಿಯ ಅಳವಡಿಕೆ ವಿದ್ಯಾರ್ಥಿಗಳ ಮನೋವಿಕಾಸಕ್ಕೆ ಪೂರಕವಾದುದು. ಭೂಮಿಯನ್ನು ಹೊರತುಪಡಿಸಿ ಯಾವುದಾದರೂ ಕ್ಷೇತ್ರಕ್ಕೆ ಭೂಮಿಯಷ್ಟು ತೂಕದ ಹೆಸರಿದ್ದರೆ ಅದು ರಂಗಭೂಮಿಗೆ ಮಾತ್ರ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿಯವರು ಅಭಿಪ್ರಾಯಪಟ್ಟರು.

**ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಜೆಎಸ್‌ಎಸ್ ಕಲಾಮಂಟಪದ ವತಿಯಿಂದ** ಚಾಮರಾಜನಗರದ ವರನಟ ಡಾ. ರಾಜಕುಮಾರ್ ಜಿಲ್ಲಾ ರಂಗಮಂದಿರದಲ್ಲಿ 11 ಡಿಸೆಂಬರ್ 2025 ರಿಂದ 13 ಡಿಸೆಂಬರ್ 2025 ವರೆಗೆ ಆಯೋಜಿಸಲಾಗಿದ್ದ ಜೆಎಸ್‌ಎಸ್ ರಂಗೋತ್ಸವ –2025 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ತ್ರಿವಿಧ ದಾಸೋಹಕ್ಕೆ ಹೆಸರಾಗಿರುವ ಜೆಎಸ್‌ಎಸ್ ಸಂಸ್ಥೆ ದೇಶ, ವಿದೇಶಗಳಲ್ಲಿ ಸಾಮಾಜಿಕ ಸೇವೆಯನ್ನು ಬದ್ಧತೆಯಿಂದ ನಿರಂತರವಾಗಿ ಮುಂದುವರಿಸಿಕೊಂಡು ಬರುತ್ತಿದೆ. ನಾವು ಶಿಕ್ಷಣದಲ್ಲಿ ಯಾವುದನ್ನು ಮಕ್ಕಳಿಗೆ ಕೊಡಲಾಗುತ್ತಿಲ್ಲ ಎಂದು ಕೊರಗುತ್ತಿದ್ದೇವೆಯೋ ಅದನ್ನು ಜೆಎಸ್‌ಎಸ್ ಸಂಸ್ಥೆ ಸದ್ದಿಲ್ಲದೆ ಕಳೆದ 15 ವರ್ಷಗಳಿಂದ ಬಹಳ ಸಮರ್ಥವಾಗಿ ಕೊಡುತ್ತಿದೆ. ಒಂದು ವ್ಯಕ್ತಿತ್ವದ ಸರ್ವಾಂಗೀಣ ವಿಕಾಸವೇ ಶಿಕ್ಷಣ. ಪಠ್ಯಕೇಂದ್ರಿತ ಶಿಕ್ಷಣದಿಂದ ಸಾಧ್ಯವಾಗದ ವಿಷಯ ಜ್ಞಾನವನ್ನು ಪಡೆಯಲು ರಂಗ ಚಟುವಟಿಕೆಗಳು ಅತ್ಯಂತ ಅವಶ್ಯಕ. ಇಂತಹ ಚಟುವಟಿಕೆಗಳನ್ನು ವಿಸ್ತರಿಸುವ ನಿಟ್ಟಿನಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯೊಂದಿಗೆ ಸಾರ್ವಜನಿಕರಾದ ನಾವು ಪಾಲ್ಗೊಳ್ಳಬೇಕಾಗಿದೆ. ಇಂದಿನ ಒತ್ತಡದ ಬದುಕಿನ ನಡುವೆ ನಾಟಕದ ಅಭಿರುಚಿಯನ್ನು ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಮಕ್ಕಳನ್ನು ಕೇಂದ್ರೀಕರಿಸಿ ಮಕ್ಕಳ ನಾಟಕಗಳನ್ನು ಆಯೋಜಿಸುತ್ತಿರುವ ಜೆಎಸ್‌ಎಸ್ ಕಲಾ ಮಂಟಪದ ಕಾರ್ಯ ಅತ್ಯಂತ ಶ್ಲಾಘನೀಯವಾದುದು.

ಚಾಮರಾಜನಗರವು ಡಾ. ರಾಜಕುಮಾರ್ ಅವರಂತಹ ದೊಡ್ಡ ಪ್ರತಿಭೆಯನ್ನು ಕೊಟ್ಟ ಗಟ್ಟಿ ನೆಲ. ಜನಪದ ಮಹಾಕಾವ್ಯಗಳನ್ನು ಕಟ್ಟಿ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ, ಸಮರ್ಥವಾಗಿ ಬೆಳೆಸಿಕೊಂಡು ಬಂದಿರುವ ಈ ನೆಲದಲ್ಲಿ ಆರಂಭಗೊಂಡಿರುವ ಜೆಎಸ್‌ಎಸ್ ರಂಗೋತ್ಸವ ನಾಡಿನ ತುಂಬಾ ಸಂಚಲನವನ್ನು ಉಂಟುಮಾಡುವಲ್ಲಿ ಯಶಸ್ವಿಯಾಗಲಿ. ವಿದ್ಯಾರ್ಥಿಗಳನ್ನು ಈ ರೀತಿಯ ಚಟುವಟಿಕೆಗಳಿಗೆ ತೆರೆದುಕೊಳ್ಳುವ ಹಾಗೆ ಮಾಡಿದರೆ ತುಂಬಾ ಒಳ್ಳೆಯ ಭವಿಷ್ಯವನ್ನು ನಾವು ಕಾಣಬಹುದು. ಮಕ್ಕಳ ಭವಿಷ್ಯ ಕೂಡ ಉಜ್ವಲವಾಗುತ್ತದೆ ಮತ್ತು ಅವರಿಗೆ ಬೇರೆ ಬೇರೆ ಕ್ಷೇತ್ರದ ಅನುಭವಗಳಾಗುತ್ತದೆ. ಮೊದಲಿನಿಂದಲೂ ನಾಡಿನ ಕಲೆ, ಸಂಸ್ಕೃತಿಯನ್ನು ಶ್ರೀಮಂತಗೊಳಿಸುತ್ತಾ, ಜನಪದ ಕಲೆಗಳ ತವರೂರು ಎನಿಸಿಕೊಂಡಿರುವ ಚಾಮರಾಜನಗರದಿಂದ ರಂಗಭೂಮಿ ಸಮರ್ಥವಾಗಿ ಬೆಳೆಯುವ ಎಲ್ಲಾ ಭರವಸೆಗಳನ್ನು ಇಂತಹ ರಂಗೋತ್ಸವಗಳು ಕೊಡುತ್ತಿವೆ. ಇದರ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕು ಎಂದು ಹೇಳಿದರು.

ರಂಗೋತ್ಸವದ ಸಂಚಾಲಕರಾದ ಶ್ರೀ ಚಂದ್ರಶೇಖರಾಚಾರ್ ಹೆಗ್ಗೋಠಾರ ಅವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, 2011ರಲ್ಲಿ ಮೈಸೂರಿನಲ್ಲಿ ಪ್ರಾರಂಭಗೊಂಡ ಜೆಎಸ್‌ಎಸ್ ರಂಗೋತ್ಸವ ಮುಂದೆ ಬೆಂಗಳೂರು, ಚಾಮರಾಜನಗರ, ಗುಂಡ್ಲುಪೇಟೆ, ಸರಗೂರಿಗೆ ವಿಸ್ತರಿಸಿದೆ. ಇದುವರೆಗೂ 1800 ಮಕ್ಕಳು ರಂಗ ತರಬೇತಿಯನ್ನು ಪಡೆದು ನಾಟಕಗಳಲ್ಲಿ ಅಭಿನಯಿಸಿದ್ದಾರೆ ಮತ್ತು ಒಂದು ಲಕ್ಷದ ಐವತ್ತು ಸಾವಿರ ವಿದ್ಯಾರ್ಥಿಗಳು ನಾಟಕಗಳನ್ನು ನೋಡಿದ್ದಾರೆ. ಇಡೀ ಕರ್ನಾಟಕದಲ್ಲಿ ವಿದ್ಯಾರ್ಥಿಗಳಿಗೆ ರಂಗಭೂಮಿಯ ಪರಿಚಯ ಮತ್ತು ಅಭಿನಯಿಸುವ ಅವಕಾಶವನ್ನು ಜೆಎಸ್‌ಎಸ್ ಸಂಸ್ಥೆ ಮಾತ್ರ ಒದಗಿಸಿಕೊಟ್ಟಿದೆ. 2012ರಲ್ಲಿ ನೇಪಾಳದ ಕಠ್ಮಂಡುವಿನಲ್ಲಿ ನಡೆದ ಅಂತಾರಾಷ್ಟ್ರೀಯ ನಾಟಕೋತ್ಸವದಲ್ಲಿ ನಮ್ಮ ಜೆಎಸ್‌ಎಸ್ ಕಲಾ ಮಂಟಪದ 15 ವಿದ್ಯಾರ್ಥಿಗಳು ನಾಟಕವನ್ನು ಪ್ರದರ್ಶನ ಮಾಡಿರುವುದು ಹೆಮ್ಮೆಯ ವಿಚಾರ. ಮಕ್ಕಳಿಗೆ ಪಠ್ಯದ ಜೊತೆಗೆ ಬೇರೆ ಬೇರೆ ಸಾಂಸ್ಕೃತಿಕ ಕಲೆಯ ಪರಿಚಯ ಮಾಡಿ ಅವರ ವ್ಯಕ್ತಿತ್ವದ ವಿಕಸನಗೊಳಿಸುವ ಉದ್ದೇಶದಿಂದ ಜೆಎಸ್‌ಎಸ್ ರಂಗೊತ್ಸವ ಆರಂಭಿಸಲಾಗಿದೆ ಎಂದು ಹೇಳಿದರು.

ಚಲನಚಿತ್ರ ಕಲಾವಿದರಾದ ಶ್ರೀಮತಿ ರೇಖಾ ರೋಹಿತ್ (ಬೇಬಿ ರೇಖಾ) ಮಾತನಾಡಿ ರಂಗಭೂಮಿಯು ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯವನ್ನು ತಂದುಕೊಡುತ್ತದೆ. ರಂಗಭೂಮಿಯ ಮುಖ್ಯ ಉದ್ದೇಶ ಸೃಜನಶೀಲತೆಯನ್ನು ಹೆಚ್ಚಿಸುವುದು, ಸಾಂಸ್ಕೃತಿಕ ಪರಂಪರೆಯನ್ನು ಬೆಳೆಸುವುದು ಮತ್ತು ಕಲಾವಿದರನ್ನು ರೂಪಿಸುವುದಾಗಿದೆ. ರಂಗ ಸಂಗೀತ, ನಾಟಕ ರಚನೆ ಹಾಗೂ ಪ್ರದರ್ಶನಗಳ ಮೂಲಕ ಕಲಾ ಪರಂಪರೆಯನ್ನು ಬೆಳೆಸುತ್ತದೆ. ಶಿಕ್ಷಣಕ್ಕೆ ರಂಗ ಕಲೆಯ ಸ್ಪರ್ಶ ನೀಡಿದರೆ ಪರಿಣಾಮಕಾರಿ ಕಲಿಕೆ ಸಾಧ್ಯವಾಗುತ್ತದೆ. ಮನರಂಜನೆ ಹೆಚ್ಚಾದಂತೆ ಮನಸ್ಸು ವಿಕಾಸಗೊಳ್ಳುತ್ತದೆ. ರಂಗ ಚಟುವಟಿಕೆಗಳು ಮಾನಸಿಕ ಒತ್ತಡಗಳನ್ನು ದೂರಮಾಡುವುದರ ಜೊತೆಗೆ ಶ್ರದ್ಧೆ, ಶಿಸ್ತು, ಏಕಾಗ್ರತೆ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸುವ, ಪ್ರಾಪಂಚಿಕ ಜ್ಞಾನವನ್ನು ವಿಸ್ತರಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ಮೋನಾರೋತ್ ಮಾತನಾಡಿ, ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಅಭಿರುಚಿಯನ್ನು ಬೆಳೆಸಿಕೊಳ್ಳುವುದರ ಮೂಲಕ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಶಾಲಾ

ಕಾಲೇಜುಗಳಲ್ಲಿ ಪ್ರತಿಭೆಯನ್ನು ಹೊರಹಾಕಲು ಅವಕಾಶಗಳನ್ನು ಕಲ್ಪಿಸಿಕೊಡಲಾಗುತ್ತಿದ್ದು, ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು. ನೃತ್ಯ, ನಾಟಕ, ಕ್ರೀಡೆ ಮೊದಲಾದ ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳನ್ನು ಮಾನಸಿಕವಾಗಿ ಮತ್ತು ಶಾರೀರಿಕವಾಗಿ ಸದೃಢರನ್ನಾಗಿಸುತ್ತವೆ. ಸಕಾರಾತ್ಮಕ ಭಾವನೆಯನ್ನು ಮೂಡಿಸುತ್ತವೆ ಎಂದು ಹೇಳಿದರು.

ಪಬ್ಲಿಕ್ ಶಾಲೆಯ ಸಂಗೀತ ಶಿಕ್ಷಕಿ ಶ್ರೀಮತಿ ಸೌಮ್ಯ ರವರು ಮತ್ತು ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಡಾ. ಎನ್. ಮಹದೇವಸ್ವಾಮಿಯವರು ಸ್ವಾಗತಿಸಿದವರು. ಕನ್ನಡ ಪ್ರಾಧ್ಯಾಪಕರಾದ ಶ್ರೀಮತಿ ಜಮುನ ವಂದನಾರ್ಪಣೆ ಮಾಡಿದರು. ಶ್ರೀ ಆರ್. ಉಮೇಶ್ ಕಾರ್ಯಕ್ರಮ ನಿರೂಪಿಸಿದರು.

ಮೊದಲ ದಿನ ಶರೀಫ ನಾಟಕವನ್ನು ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜಿನ ವಿದ್ಯಾರ್ಥಿಗಳು ಅಭಿನಯಿಸಿದರು. ಇದೇ ನಾಟಕವನ್ನು ಸಂಜೆ ಸಾರ್ವಜನಿಕರಿಗಾಗಿ ಮರುಪ್ರದರ್ಶಿಸಲಾಯಿತು.

ದಿನಾಂಕ 12.12.2025ರ ಶುಕ್ರವಾರ ಧಾಂ.....ಧೂಂ......ಸುಂಟರಗಾಳಿ ನಾಟಕವನ್ನು ಮೈಸೂರಿನ ಲಕ್ಷ್ಮೀಪುರಂನ ಜೆಎಸ್‌ಎಸ್ ಪ್ರೌಢಶಾಲೆ ವಿದ್ಯಾರ್ಥಿಗಳು ಪ್ರದರ್ಶಿಸಿದರು. ಇದೇ ನಾಟಕವನ್ನು ಸಂಜೆ ಸಾರ್ವಜನಿಕರಿಗಾಗಿ ಮರುಪ್ರದರ್ಶಿಸಲಾಯಿತು.

## ಜೆಎಸ್‌ಎಸ್ ರಂಗೋತ್ಸವ ಸಮಾರೋಪ

**ಚಾಮರಾಜನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ** ದಿನಾಂಕ 13.12.2025ರಂದು ಜೆಎಸ್‌ಎಸ್ ರಂಗೋತ್ಸವ–2025ರ ಸಮಾರೋಪ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಶ್ರೀ ಸಿ.ಎಂ. ನರಸಿಂಹಮೂರ್ತಿಯವರು ಮಾತನಾಡಿ, ರಂಗಭೂಮಿ ಕೇವಲ ಮನೋರಂಜನೆಯಲ್ಲ, ಸಾಮಾಜಿಕ ಕಳಕಳಿಯ ಪ್ರತಿಬಿಂಬ. ಸಮಾಜದಲ್ಲಿನ ಅನಿಷ್ಟಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ರಂಗಭೂಮಿಯು ಉತ್ತಮ ವೇದಿಕೆಯಾಗಿದೆ. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯು ಸಾವಿರಾರು ಮಕ್ಕಳಿಗೆ ರಂಗಭೂಮಿ ಚಟುವಟಿಕೆಗಳನ್ನು ಕಲ್ಪಿಸಿಕೊಡುವುದರ ಮೂಲಕ ಲಕ್ಷಾಂತರ ಜನರು ರಂಗಭೂಮಿಯ ನಾಟಕಗಳನ್ನು ವೀಕ್ಷಿಸುತ್ತಿದ್ದಾರೆ. ಇಡೀ ವಿಶ್ವದಲ್ಲಿಯೇ ಉತ್ತಮ ಕೆಲಸವನ್ನು ಮಾಡುತ್ತಿದೆ. ರಂಗಭೂಮಿಯಲ್ಲಿ ಹೆಚ್ಚು ಕ್ರಿಯಾಶೀಲತೆಯನ್ನು ಹೊಂದಿರುವವರು ಸಮಾಜದ ಉನ್ನತ ಸ್ಥಾನದ ವ್ಯಕ್ತಿಗಳಾಗಿ ಬೆಳೆಯಲು ಸಾಧ್ಯ. ವಿದ್ಯಾರ್ಥಿಗಳು ರಂಗಭೂಮಿಯ ಮೂಲಕ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಪ್ರತಿಭೆಗಳ ಪ್ರತಿಭಾನ್ವೇಷಣೆಯ ಅನುಕೂಲ ಪಡೆದುಕೊಳ್ಳಬೇಕು. ಚಾಮರಾಜನಗರ ಜಿಲ್ಲೆಯು ಜಾನಪದ ಕಲೆಗಳ ತವರೂರಾಗಿದ್ದು, ರಂಗಭೂಮಿ ಕ್ಷೇತ್ರ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ. ಇಂತಹ ರಂಗ ಕಲೆಗಳನ್ನು ಉಳಿಸಿ ಬೆಳೆಸಬೇಕು ಎಂದು ಕರೆಕೊಟ್ಟರು.

ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ. ಬಿ.ಟಿ. ಕವಿತಾರವರು ರಂಗಭೂಮಿಯನ್ನು ಒಳಗೊಂಡಂತೆ ಕಲೆ ಮನುಷ್ಯನಿಗೆ ಆತ್ಮವಿಶ್ವಾಸವನ್ನು ಕೊಡುವ ಒಂದು ಮಾಧ್ಯಮ. ರಂಗದ ಮೂಲಕ ಚಟುವಟಿಕೆಗಳನ್ನು ಕಲಿಸಿ, ವ್ಯಕ್ತಿತ್ವವನ್ನು ರೂಪಿಸುವ ಪ್ರಯತ್ನವು ಪರಿಣಾಮಕಾರಿಯಾದ ಕಲಿಕೆಯ ಮಾಧ್ಯಮವಾಗುತ್ತದೆ. ಚಾಮರಾಜನಗರ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದ್ದು



ಜಾನಪದ ಕಲೆಗಳು, ಗ್ರಾಮೀಣ ಸಂಪ್ರದಾಯಗಳು ಮತ್ತು ಜನರ ಸರಳತೆ –ಸೌಜನ್ಯಗಳು ಪ್ರಮುಖ ಆಕರ್ಷಣೆಯಾಗಿವೆ. ವಿದ್ಯಾರ್ಥಿಗಳಾದ ನೀವು ಈ ನೆಲದವರಾಗಿರುವುದಕ್ಕೆ ಹೆಮ್ಮೆಪಡುತ್ತಾ, ಉತ್ತಮ ವಿದ್ಯಾಭ್ಯಾಸದೊಂದಿಗೆ ಆಯ್ಕೆಯ ಕ್ಷೇತ್ರದಲ್ಲಿ ಉನ್ನತ ಗುರಿಗಳನ್ನಿಟ್ಟುಕೊಂಡು, ಸಾಧನೆಗೈದು ಚಾಮರಾಜನಗರದ ಹೆಸರನ್ನು ಇನ್ನಷ್ಟು ಉಜ್ವಲಗೊಳಿಸಬೇಕು. ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಂಗೀತ ಭರತನಾಟ್ಯ, ರಂಗಭೂಮಿ, ಮುಂತಾದ ಆಸಕ್ತಿ ವಿಷಯಗಳಲ್ಲಿ ಉನ್ನತ ಶಿಕ್ಷಣ ಪಡೆಯುವ ಅವಕಾಶವಿದೆ. ಪ್ರಾಮಾಣಿಕ ಪ್ರಯತ್ನದೊಂದಿಗೆ ಸಾಧನೆಗೈದು ನಿಮಗೂ ಮತ್ತು ಸಂಸ್ಥೆಗೂ ಹೆಮ್ಮೆಯನ್ನು ತರುವ ಗುರಿಯನ್ನು ಹೊಂದಬೇಕು. ರಂಗೋತ್ಸವದಂತಹ ಕಾರ್ಯಕ್ರಮಗಳು ವಿಸ್ತೃತವಾಗಿ ನಡೆಯುವ ಮೂಲಕ ವಿದ್ಯಾರ್ಥಿಗಳ ಪ್ರತಿಭೆಯನ್ನು ಮತ್ತಷ್ಟು ಅನಾವರಣಗೊಳಿಸುವಂತಾಗಲಿ ಎಂದು ಹೇಳಿದರು.

ಪದವಿ ವಿದ್ಯಾರ್ಥಿಗಳಾದ ಕು. ಸೋಮಪ್ರಭ ಮತ್ತು ಕು. ಪೂರ್ಣಶ್ರೀ ಪ್ರಾರ್ಥಿಸಿದರು. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ದೇವರಾಜಮೂರ್ತಿಯವರು ಸ್ವಾಗತಿಸಿದರು. ಶ್ರೀ ಚಂದ್ರಶೇಖರಾಚಾರ್ ವರದಿ ಮಂಡಿಸಿದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಎ.ಆರ್. ಸುಷ್ಮಾ ವಂದಿಸಿದರು. ಶ್ರೀ ಆರ್. ಉಮೇಶ್ ಕಾರ್ಯಕ್ರಮ ನಿರೂಪಿಸಿದರು.

## ರಾಷ್ಟ್ರೀಯ ರೈತ ದಿನಾಚರಣೆ

**ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ** ರಾಷ್ಟ್ರೀಯ ರೈತ ದಿನಾಚರಣೆ, ಕೇಂದ್ರ ಕೃಷಿ ಸಚಿವರಾದ ಶ್ರೀ ಶಿವರಾಜ್ ಸಿಂಗ್ ಚೌಹಾಣ್‌ರವರ ಕಾರ್ಯಕ್ರಮದ ನೇರಪ್ರಸಾರ ಹಾಗೂ ಪಶು ಆರೋಗ್ಯ ಶಿಬಿರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ಬಿ.ಎನ್. ಜ್ಞಾನೇಶ್‌ರವರು ರೈತರ ದಿನಾಚರಣೆಯ ಮಹತ್ವ ತಿಳಿಸಿ ಮಾತನಾಡಿ ಜಾನುವಾರುಗಳು ರೈತರ ಬೆನ್ನೆಲುಬು, ರೈತರಿಗೆ ನಿಯಮಿತ ಆರ್ಥಿಕ ಬೆಂಬಲ ಜಾನುವಾರು ಸಾಕಣೆಯಿಂದ ಮಾತ್ರ ಸಾಧ್ಯ. ಆದಕಾರಣ ಜಾನುವಾರುಗಳ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಕರೆನೀಡಿದರು. ಪಶು ವಿಜ್ಞಾನದ ವಿಷಯತಜ್ಞರಾದ

ಡಾ. ಯು.ಎಂ. ರಕ್ಷಿತ್‌ರಾಜ್‌ರವರು ಪಶುವೈದ್ಯಕೀಯ ಇಲಾಖೆಯ ಸಿಬ್ಬಂದಿಯೊಂದಿಗೆ 85ಕ್ಕೂ ಹೆಚ್ಚು ಜಾನುವಾರುಗಳಿಗೆ ಔಷಧಿ ಲಸಿಕೆಯನ್ನು ನೀಡಿದರು.

ದೂರ ಗ್ರಾಮದ ಶ್ರೀಮತಿ ಅಶ್ವಿನಿ, ಮೈಸೂರಿನ ಶ್ರೀಮತಿ ಬಿಂದು ಆರ್. ಸ್ವಾಮಿ, ಹೊಸಕೋಟೆ ಗ್ರಾಮದ ಶ್ರೀ ಸಿದ್ದಪ್ಪ, ಶ್ರೀ ಪ್ರಭುಸ್ವಾಮಿ, ಚಟ್ನಹಳ್ಳಿ ಗ್ರಾಮದ ರಘುನಂದನ್, ಕೆ. ಬೆಳ್ತೂರು ಗ್ರಾಮದ ಶ್ರೀಮತಿ ಸುಮಾ ನಾಗರಾಜು ಹಾಗೂ ಕರಣಕುಪ್ಪೆ ಗ್ರಾಮದ ಶ್ರೀ ಕೆ.ಎಂ. ರಾಜುರವರುಗಳನ್ನು ಸನ್ಮಾನಿಸಲಾಯಿತು.

ಶ್ರೀ ಚಂದ್ರಮೌಳೇಶ್ವರ ಮಹಿಳಾ ಉತ್ಪಾದಕರ ಸಂಘಕ್ಕೆ ಆರ್ಥಿಕ ಸ್ವಾವಲಂಬನೆಗಾಗಿ ಹಾಗೂ ಉದ್ಯಮಶೀಲತೆ ಉತ್ತೇಜಿಸುವ ಸಲುವಾಗಿ ಐಸಿಎಆರ್ ಜೆಎಸ್‌ಎಸ್ ಕೆವಿಕೆ ವತಿಯಿಂದ ಬಾಳೆಕಾಯಿ ಚಿಪ್ಸ್ ಮಾಡುವ ಯಂತ್ರ ಸೀಲಿಂಗ್ ಯಂತ್ರ ಹಾಗೂ ತೂಕ ಮಾಡುವ ಯಂತ್ರ ಒದಗಿಸಲಾಯಿತು. □

## ರಾಷ್ಟ್ರೀಯ ಗಣಿತ ದಿನ ಆಚರಣೆ



**ಸುತ್ತೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ಜ್ಞಾನ ಸಂಪನ್ಮೂಲ ಕೇಂದ್ರದ ವತಿಯಿಂದ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ದಿನಾಂಕ 22.12.2025 ರಂದು ರಾಷ್ಟ್ರೀಯ ಗಣಿತ ದಿನವನ್ನು ಆಚರಿಸಲಾಯಿತು.

ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ಜ್ಞಾನ ಸಂಪನ್ಮೂಲ ಕೇಂದ್ರದ ಸಂಯೋಜನಾಧಿಕಾರಿಗಳಾದ ಶ್ರೀ ಇಳಂಗೋವನ್‌ರವರು ರಾಷ್ಟ್ರೀಯ ಗಣಿತ ದಿನದ ವಿಶೇಷತೆ ಕುರಿತು ಉಪನ್ಯಾಸ ನೀಡಿದರು. ಶ್ರೀನಿವಾಸ್ ರಾಮಾನುಜನ್ ಜೀವನ ಚರಿತ್ರೆ, ಗಣಿತಕ್ಷೇತ್ರಕ್ಕೆ ಅವರ ಕೊಡುಗೆಗಳು, ಅನಂತ ಸರಣಿಗಳು, ರಾಮಾನುಜನ್ ಮಾಯಾ ಚೌಕ, ರಾಮಾನುಜನ್‌ರವರು ರಚಿಸಿದ ಸೂತ್ರಗಳು ಪ್ರಮೇಯಗಳು, ಸಂಖ್ಯಾ ಸಿದ್ಧಾಂತಗಳು

ಇತ್ಯಾದಿಗಳ ಬಗ್ಗೆ ವಿವರಿಸಿದರು,

ಮೈಸೂರು ಸೈನ್ಸ್ ಫೌಂಡೇಶನ್ನಿನ ನಿರ್ದೇಶಕರು ಹಾಗೂ ಓರಗಾಮಿ ತಜ್ಞರಾದ ಶ್ರೀ ಮುರಳಿಧರ್‌ರವರು ಓರಗಾಮಿ ಕಾಗದದ ಕಲೆ ಕುರಿತು ಪ್ರಾಯೋಗಿಕವಾಗಿ ವಿದ್ಯಾರ್ಥಿಗಳಿಗೆ ತಿಳಿಸಿದರು. ಗಣಿತದ ವಿವಿಧ ಘನ ಆಕೃತಿಗಳು, ನಕ್ಷತ್ರ, ಸಿಲಿಂಡರ್, ಶಂಕು, ಪಿರಮಿಡ್, ರಾಕೆಟ್‌ಗಳು ಹೀಗೆ ಹಲವು ಅಕೃತಿಗಳನ್ನು ಕಾಗದದಿಂದ ತಯಾರಿಸುವುದರ ಮೂಲಕ ಮಕ್ಕಳಲ್ಲಿ ಗಣಿತದ ಬಗ್ಗೆ ಸೌಂದರ್ಯ ಪ್ರಜ್ಞೆ ಮೂಡಿಸುವುದರೊಂದಿಗೆ, ಗಣಿತ ಕಬ್ಬಿಣದ ಕಡಲೆಯಲ್ಲ, ಇದು ಸುಲಿದ ಬಾಳೆಹಣ್ಣಿನಷ್ಟೇ ಸಿಹಿಯಾಗಿರುತ್ತದೆ ಎಂದು ಹೇಳಿದರು. ವಿದ್ಯಾರ್ಥಿಗಳು ಸ್ವತಃ ತಾವೇ ಹಲವಾರು ಗಣಿತದ ಮಾದರಿಗಳನ್ನು ತಯಾರಿಸುವುದರ ಮೂಲಕ ಸಂತೋಷದಾಯಕವಾಗಿ ಕಲಿಕೆಯಲ್ಲಿ ಭಾಗವಹಿಸಿದ್ದರು.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು ವಿದ್ಯಾರ್ಥಿಗಳು ಜೀವನದಲ್ಲಿ ಒಳ್ಳೆಯ ಕನಸುಗಳನ್ನು ಕಾಣಬೇಕು, ಜೊತೆಗೆ ಸರಿಯಾದ ಮಾರ್ಗದಲ್ಲಿ ಪರಿಶ್ರಮದೊಂದಿಗೆ ಕನಸುಗಳನ್ನು ನನಸಾಗಿಸಿಕೊಳ್ಳಬೇಕು. ರಾಮಾನುಜನ್‌ರವರು ಬದುಕಿದ್ದು ಕೇವಲ 32 ವರ್ಷ. ಆದರೆ ಅವರ ಸಾಧನೆ ಶತಮಾನಗಳಾದರೂ ಉಳಿದಿದೆ. ಬದುಕಿನಲ್ಲಿ ನಮ್ಮ ಆಯಸ್ಸು ಕಡಿಮೆ ಇದ್ದರೂ ಪರವಾಗಿಲ್ಲ, ಆದರೆ ನಮ್ಮ ಸಾಧನೆಗೆ ಬಡತನವಿರಬಾರದು ಎಂದರು.

ಕಾರ್ಯಕ್ರಮವನ್ನು ಶಿಕ್ಷಕರಾದ ಶ್ರೀ ವಿ. ವಿನೋದ್ ಕುಮಾರ್ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಸುಮಾರು 500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗವಹಿಸಿದ್ದರು.

□

## ಕು. ಧವನಿಗೆ ಅಕಾಡೆಮಿ 'ಬಾಲ ಗೌರವ' ಪ್ರಶಸ್ತಿ



**ಸುತ್ತೂರಿನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯ** 6ನೇ ತರಗತಿಯ ವಿದ್ಯಾರ್ಥಿನಿ **ಕು. ಎನ್. ಧವನಿಯ** ಬಹುಮುಖ ಕ್ಷೇತ್ರದ ಸಾಧನೆಯನ್ನು ಗುರುತಿಸಿ ಬೆಂಗಳೂರಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಧಾರವಾಡದ ಕರ್ನಾಟಕ ಬಾಲ ವಿಕಾಸ ಅಕಾಡೆಮಿಯು 2022– 23 ನೇ ಸಾಲಿನ ಅಕಾಡೆಮಿ ಬಾಲ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಈ ಅಪೂರ್ವ ಸಾಧನೆಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿ ಮುಂದಿನ ಜೀವನದಲ್ಲಿ ಇನ್ನಷ್ಟು ಯಶಸ್ಸು ದೊರೆಯಲಿ ಎಂದು ಆಡಳಿತಾಧಿಕಾರಿಗಳು, ಸಂಯೋಜನಾಧಿಕಾರಿಗಳು, ಮುಖ್ಯೋಪಾಧ್ಯಾಯರುಗಳು, ವಿವಿಧ ವಿಭಾಗಗಳ ಮುಖ್ಯಸ್ಥರು ಶುಭ ಹಾರೈಸಿದ್ದಾರೆ.

## ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಕೃಷ್ಣರಾಜ ಕ್ಷೇತ್ರದ ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸರವರು ಮಾತನಾಡುತ್ತಿರುವುದು. (27 ಡಿಸೆಂಬರ್ 2025)

ವಿದ್ಯೆ ಸಾಧಕರ ಸ್ವತ್ತು. ಜೆಎಸ್‌ಎಸ್ ಮಹಾವಿದ್ಯಾಪೀಠವು ಶಿಕ್ಷಣ ಮತ್ತು ಆರೋಗ್ಯದಲ್ಲಿ ಮಹತ್ತರವಾದ ಸಾಧನೆಯನ್ನು ಮಾಡಿದೆ. ಪರಮ ಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ದೂರದೃಷ್ಟಿಯಿಂದ ಜನಕಲ್ಯಾಣ ಕಾರ್ಯಕ್ರಮಗಳು ನಡೆಯುತ್ತಿವೆ. ಪೂಜ್ಯರಿಗೆ ಸಮಾಜ ಸದಾ ಋಣಿಯಾಗ ಬೇಕು ಎಂದು ಕೃಷ್ಣರಾಜ ಕ್ಷೇತ್ರದ ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸರವರು ಅಭಿಪ್ರಾಯಪಟ್ಟರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನಲ್ಲಿ** ನಡೆದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ವಿದ್ಯೆ ಜೊತೆಗೆ ಸಂಸ್ಕಾರವು ಮುಖ್ಯ. ವಿದ್ಯಾರ್ಥಿಗಳು ದೇಶ, ನಾಡು, ಗುರುಹಿರಿಯರನ್ನು ಪ್ರೀತಿಸಬೇಕು. ದೇಶದ ಸತ್ಪ್ರಜೆಗಳಾಗಿ ಬೆಳೆಯಬೇಕು ಎಂದು ಹೇಳಿದರು.

ಸಮಾರೋಪ ಭಾಷಣ ಮಾಡಿದ ಕನ್ನಡಪ್ರಭ ದಿನಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾದ ಶ್ರೀ ಅಂಶಿಪ್ರಸನ್ನಕುಮಾರ್‌ರವರು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳು ಮುಖ್ಯ. ಶಿಸ್ತು, ಪರಿಶ್ರಮ, ಗುರಿಯೊಂದಿಗೆ ಸಾಧಕರಾಗಬೇಕು. ವಿದ್ಯಾರ್ಥಿಗಳು ದೊಡ್ಡ ಕನಸುಗಳನ್ನು ಕಾಣುತ್ತ ತಮಗೆ ತಾವೇ ಶಿಲ್ಪಿಗಳಾಗಬೇಕು. ಇಂದು ಅವಕಾಶಗಳು ವಿಪುಲವಾಗಿವೆ. ಅದರ ಸದುಪಯೋಗ ಪಡಿಸಿಕೊಳ್ಳಬೇಕು. ಶ್ರೀ ರಾಜೇಂದ್ರ ಸ್ವಾಮಿಗಳವರ ಅನನ್ಯ ಸೇವೆಯಿಂದ ಅಕ್ಷರ ಕ್ಷೇತ್ರದಲ್ಲಿ ಅದ್ಭುತ ಸಾಧನೆಯಾಗಿದೆ. ಗ್ರಂಥಾಲಯವನ್ನು ಚೆನ್ನಾಗಿ ಬಳಸಿಕೊಳ್ಳಿ ಮತ್ತು ಮೊಬೈಲನ್ನು ಮಿತವಾಗಿ ಬಳಸಿರಿ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಜೆಎಸ್‌ಎಸ್

ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿ ಯವರು ಮಾತನಾಡುತ್ತಾ, ಸಾಧಕರನ್ನು ಗೌರವಿಸುವುದು ಸಂಸ್ಕೃತಿಯ ಒಂದು ಭಾಗವಾಗಿದೆ. ಜನ್ಮದಾತರನ್ನು, ಗುರುಗಳನ್ನು ಗೌರವಿಸಿ. ವಿದ್ಯೆ ಜೊತೆಗೆ ವಿನಯವು ಇರಲಿ ಎಂದು ತಿಳಿಸಿದರು. ಅಂತಾರಾಷ್ಟ್ರೀಯ ಕ್ರೀಡಾಪಟು ಶ್ರೀ ಯೋಗೇಂದ್ರರವರು ದೈಹಿಕ ಸಾಮರ್ಥ್ಯಕ್ಕೆ ಕ್ರೀಡೆಗಳು ಅವಶ್ಯ. ಆರೋಗ್ಯವಂತರಾಗಲು ಕ್ರೀಡೆಗಳಿಗೆ ಮಹತ್ವ ನೀಡಬೇಕೆಂದು ತಿಳಿಸಿದರು.

ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ನಂಜುಂಡಸ್ವಾಮಿಯವರು ಸ್ವಾಗತಿಸಿದರು. ಸಾಂಸ್ಕೃತಿಕ ವೇದಿಕೆಯ ಸಂಚಾಲಕರಾದ ಶ್ರೀ ಜಿ. ರಮೇಶ್, ಕ್ರೀಡಾಸಂಚಾಲಕರಾದ ಶ್ರೀ ಟಿ. ಅರವಿಂದರವರು ವೇದಿಕೆ ಯಲ್ಲಿ ಉಪಸ್ಥಿತರಿದ್ದರು ಸಮಾರಂಭದಲ್ಲಿ ಅಧ್ಯಾಪಕರು, ಅಧ್ಯಾಪಕೇತರರು, ಪೋಷಕರು, ವಿದ್ಯಾರ್ಥಿಗಳು ಹಾಗೂ ಮಾಧ್ಯಮ ಮಿತ್ರರು ಭಾಗವಹಿಸಿದ್ದರು. ಕು. ಅದಿತಿ ಪ್ರಾರ್ಥಿಸಿದರು. ರಸಾಯನಶಾಸ್ತ್ರ ಉಪನ್ಯಾಸಕರಾದ ಶ್ರೀಮತಿ ಹೆಚ್.ಆರ್. ಗಾಯಿತ್ರಿ ವಂದಿಸಿದರು. ಕನ್ನಡ ಉಪನ್ಯಾಸಕರಾದ ಶ್ರೀ ಪಿ.ಎಸ್. ಮಂಜುನಾಥ್ ಕಾರ್ಯಕ್ರಮವನ್ನು ನಿರೂಪಿಸಿದರು.

## ನಿಖರ ಚಿಂತನೆ ಒಳಗೊಂಡಿರುವ ವ್ಯವಸ್ಥಿತ ಅನ್ವೇಷಣೆಯೇ ಸಂಶೋಧನೆ




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ರಾಜ್ಯ ಮಟ್ಟದ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಉದ್ಘಾಟಿಸುತ್ತಿರುವುದು. (27 ಡಿಸೆಂಬರ್ 2025)

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 27.12.2025 ರಂದು ಆಯೋಜಿಸಲಾಗಿದ್ದ 'ವಿಜ್ಞಾನ, ವಾಣಿಜ್ಯ ಮತ್ತು ನಿರ್ವಹಣಾ ಕ್ಷೇತ್ರದ ಉದಯೋನ್ಮುಖ ಸಂಶೋಧಕರಿಗಾಗಿ ಸಂಶೋಧನಾ ವಿಧಾನ' ಕುರಿತ ಒಂದು ದಿನದ ರಾಜ್ಯ ಮಟ್ಟದ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ

ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು "ಸಂಶೋಧನೆಯು ಕೇವಲ ದತ್ತಾಂಶಗಳ ಸಂಗ್ರಹವಲ್ಲ, ನಿಖರವಾದ ಚಿಂತನೆಯನ್ನು ಒಳಗೊಂಡಿರುವ ವ್ಯವಸ್ಥಿತ ಅನ್ವೇಷಣೆ. ಶಿಕ್ಷಣ 6.0 ಯುಗದಲ್ಲಿ ಸಂಶೋಧನೆಯು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಸಂಶೋಧನೆಯು ಪರಿಣಾಮಕಾರಿಯಾಗಿರಬೇಕು. ಜ್ಞಾನದ ಮೇಲಿನ ಪ್ರಭುತ್ವ ಮತ್ತು ಕೌಶಲಗಳ ಮೇಲಿನ ಹಿಡಿತ ಅತ್ಯಂತ ಅಗತ್ಯವಾದುದು. ಇಂತಹ ಉತ್ಕೃಷ್ಟತೆಯು ಸಂಶೋಧನೆಯ ಮೂಲಕ ಮಾತ್ರ ಸಾಧ್ಯ. ಸಮಾಜದ ಅಭಿವೃದ್ಧಿಯಲ್ಲಿ ಶಿಕ್ಷಣವು ಅತ್ಯಂತ ಪ್ರಮುಖ ಅಂಶವಾಗಿದೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಮಾತನಾಡುತ್ತಾ, ಸಂಶೋಧನಾ ಕ್ಷೇತ್ರದಲ್ಲಿ ಡಾ. ಸಿ.ಜಿ. ಬೆಟಸೂರಮಠ ಅವರ ಸಾಧನೆಯು ಗಮನಾರ್ಹವಾದುದು. ಜ್ಞಾನವನ್ನು ನೀಡಲು ಸರಸ್ವತಿಪುರಂನಲ್ಲಿ ಮಹಿಳಾ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ ಪರಮಪೂಜ್ಯರ ದೂರದೃಷ್ಟಿ ಅನನ್ಯವಾದುದು. ಅಧ್ಯಾಪಕರು ಜ್ಞಾನಪ್ರಸಾರ ಮತ್ತು ಜ್ಞಾನಸೃಷ್ಟಿಯ ಕಡೆಗೆ ಗಮನಹರಿಸಬೇಕು. ಸಂಶೋಧನೆಯು ವೈಜ್ಞಾನಿಕ ಮತ್ತು ವೈಚಾರಿಕತೆಯನ್ನು ಅಳವಡಿಸಿಕೊಂಡಿರಬೇಕು ಎಂದರು.

ಪ್ರಾಂಶುಪಾಲರಾದ ಡಾ. ರೇಚಣ್ಣರವರು, ಸ್ನಾತಕೋತ್ತರ ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಡಾ. ಎಸ್. ಶಿಲ್ಪಾ ಮತ್ತು ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಇ. ವಿಜಯ್‌ಶೇಖರ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿವಿಧ ಕಾಲೇಜುಗಳ ಅಧ್ಯಾಪಕರು ಮತ್ತು ಸಂಶೋಧಕರು ಭಾಗವಹಿಸಿದ್ದರು.

ಕು. ವಿದ್ಯಾ ಮತ್ತು ತಂಡದವರು ಪ್ರಾರ್ಥಿಸಿದರು. ಡಾ. ಎಸ್. ಶಿಲ್ಪಾ ಸ್ವಾಗತಿಸಿದರು. ಗಣಕ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಬಿ. ಎಲ್. ಸೌಮ್ಯ ವಂದಿಸಿದರು. ಶ್ರೀಮತಿ ಹೆಚ್.ಯು. ಪ್ರೀತಿ ಕಾರ್ಯಕ್ರಮ ನಿರೂಪಿಸಿದರು.

ಉದ್ಘಾಟನಾ ಸಮಾರಂಭದ ನಂತರ ಏಳು ತಾಂತ್ರಿಕ ಗೋಷ್ಠಿಗಳು ನೆರವೇರಿದವು. ವಾಣಿಜ್ಯ ಮತ್ತು ನಿರ್ವಹಣೆ ವಿಭಾಗಕ್ಕೆ ಸಂಬಂಧಿಸಿದಂತೆ "ಸಂಶೋಧನೆ ಎಂದರೇನು?" ವಿಷಯ ಕುರಿತಂತೆ ಮೈಸೂರು ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕರಾದ ಡಾ. ಡಿ.ಎಸ್. ಗುರು, "ಶೈಕ್ಷಣಿಕ ಸಮಗ್ರತೆ ಮತ್ತು ನೈತಿಕ ಪದ್ಧತಿಗಳು" ವಿಷಯ ಕುರಿತು ಮೈಸೂರಿನ ಎಸ್‌ಡಿಎಂಐಎಂಡಿಯ ಡಾ. ಎಂ. ವಿ. ಸುನೀಲ್, "ಎಸ್‌ಪಿಎಸ್‌ಎಸ್ ಮೂಲಕ ದತ್ತಾಂಶ ವಿಶ್ಲೇಷಣೆ" ವಿಷಯ ಕುರಿತು ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಲ್ಯಾನ್ಸಿ ಡಿಸೋಜಾ, "ವರದಿ ಬರವಣಿಗೆ ಮತ್ತು ಪ್ರಕಟಣೆಗಳು" ವಿಷಯ ಕುರಿತು ಮೈಸೂರು ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಬಿ. ಮಹದೇವಪ್ಪ ವಿಚಾರ ಮಂಡಿಸಿದರು.

ವಿಜ್ಞಾನ ವಿಭಾಗಕ್ಕೆ ಸಂಬಂಧಿಸಿದಂತೆ "ಸಾಹಿತ್ಯ ವಿಮರ್ಶೆ ಮತ್ತು ವೈಜ್ಞಾನಿಕ ಬರವಣಿಗೆ" ವಿಷಯ ಕುರಿತು ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಎಂ.ವಿ.ಎಸ್.ಎಸ್.ಟಿ. ಸುಬ್ಬರಾವ್, "ಸಂಶೋಧನಾ ಯೋಜನೆ ಮತ್ತು ಪ್ರಕಟಣೆಗಳಲ್ಲಿನ ನೈತಿಕ ಅಂಶಗಳು" ವಿಷಯ ಕುರಿತು ಮೈಸೂರಿನ ಸಿಎಸ್‌ಐಆರ್–ಸಿಎಫ್‌ಟಿಐಆರ್ ಮುಖ್ಯ ವಿಜ್ಞಾನಿಗಳು ಮತ್ತು ಪ್ರಾಧ್ಯಾಪಕರಾದ ಡಾ. ಎಸ್. ಪಿ. ಮುತ್ತುಕುಮಾರ್ "ಸಂಶೋಧನಾ ಪ್ರಕ್ರಿಯೆ ಮತ್ತು ತಂತ್ರಗಳು" ವಿಷಯವಾಗಿ ಬೆಂಗಳೂರಿನ ನಿಟ್ಟೆ ಫಾರ್ಮಸ್ಯೂಟಿಕಲ್ ಸೈನ್ಸ್ ಕಾಲೇಜಿನ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ಸುಜೀತ್ ಕುಮಾರ್ ಪ್ರಬಂಧ ಮಂಡಿಸಿದರು.

## ಪ್ರತಿಭಾ ಕಾರಂಜಿ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವತಿಯಿಂದ ನಂಜನಗೂಡು ತಾಲ್ಲೂಕಿನ ದೇಬೂರಿನ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಏರ್ಪಡಿಸಿದ್ದ ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿಯ ವಿವಿಧ ವಿಭಾಗಗಳ ಸ್ಪರ್ಧೆಗಳಲ್ಲಿ **ಸುತ್ತೂರಿನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಯ** ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾಗಿದ್ದಾರೆ.



ಪ್ರೌಢಶಾಲಾ ವಿಭಾಗದಲ್ಲಿ ವಿದ್ಯಾರ್ಥಿಗಳಾದ ಗಂಗಾಧರ ಜತ್ತಿ–ಭಾವಗೀತೆ, ಪ್ರಥಮ, ಉಷಾ–ಹಿಂದಿ ಭಾಷಣ ಪ್ರಥಮ–ಯಶೋಧ ಸಂಸ್ಕೃತ ಭಾಷಣ–ಪ್ರಥಮ, ದೃಷ್ಟಿ ರಂಗೋಲಿ, ಪ್ರಥಮ, ಪಂಪನಗೌಡ ಮತ್ತು ಕಿಶನ್ ಪಾಟೀಲ್–ರಸಪ್ರಶ್ನೆಯಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿ, ಶಾಲೆಗೆ ಕೀರ್ತಿ ತಂದಿದ್ದಾರೆ.



1ರಿಂದ 4ನೇ ತರಗತಿ ವೈಯಕ್ತಿಕ ಸ್ಪರ್ಧೆ: ವಿದ್ಯಾರ್ಥಿಗಳಾದ ತನುಶ್ರೀ–ಕನ್ನಡ ಕಂಠಪಾಠ ಪ್ರಥಮ ಬಹುಮಾನ, ಅನುಶ್ರೀ– ಧಾರ್ಮಿಕ ಪಠಣ (ಸಂಸ್ಕೃತ) ದ್ವಿತೀಯ ಬಹುಮಾನ ಗಳಿಸಿದ್ದಾರೆ.

5 ರಿಂದ 7ನೇ ತರಗತಿ ವೈಯಕ್ತಿಕ ಸ್ಪರ್ಧೆ: ನೀಲಾ ಮಂಜುನಾಥ್–ಕನ್ನಡ ಕಂಠಪಾಠ ಪ್ರಥಮ, ನಮಿತಾ – ಇಂಗ್ಲಿಷ್ ಕಂಠಪಾಠ ತೃತೀಯ, ನಿಹಾರಿಕ–ಧಾರ್ಮಿಕ ಪಠಣ (ಸಂಸ್ಕೃತ) ಪ್ರಥಮ, ವೈಷ್ಣವಿ–ಅಭಿನಯ ಗೀತೆ ದ್ವಿತೀಯ, ಪೃಥ್ವಿ –ಭಕ್ತಿ ಗೀತೆ ತೃತೀಯ ಸ್ಥಾನ ಗಳಿಸಿದ್ದಾರೆ.

ಕು. ನೀಲಾ ಮಂಜುನಾಥ್ ಮತ್ತು ಕು. ನಿಹಾರಿಕರವರು ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿ, ಶಾಲೆಗೆ ಕೀರ್ತಿ ತಂದಿದ್ದಾರೆ.

ಇವರ ಸಾಧನೆಯನ್ನು ಸಂಸ್ಥೆಯ ಆಡಳಿತಾಧಿಕಾರಿಗಳು, ಸಂಯೋಜನಾಧಿಕಾರಿಗಳು, ಮುಖ್ಯೋಪಾಧ್ಯಾಯರುಗಳು ಹಾಗೂ ಶಿಕ್ಷಕರು ಅಭಿನಂದಿಸಿದ್ದಾರೆ. □

## ಗುಂಡ್ಲುಪೇಟೆಯಲ್ಲಿ ಜೆಎಸ್‌ಎಸ್ ರಂಗೋತ್ಸವ



**ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಕಲಾಮಂಟಪ ಹಾಗೂ ಗುಂಡ್ಲುಪೇಟೆ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ** ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗಾಗಿ ಡಿಸೆಂಬರ್ 29ರಿಂದ 31 ರವರೆಗೆ 'ಜೆಎಸ್‌ಎಸ್ ರಂಗೋತ್ಸವ–2025' ಕಾರ್ಯಕ್ರಮವನ್ನು ಜೆಎಸ್‌ಎಸ್ ಅನುಭವ ಮಂಟಪದಲ್ಲಿ ಏರ್ಪಡಿಸಲಾಗಿತ್ತು. ದಿನಾಂಕ 29.12.2025ರಂದು ನಡೆದ ಉದ್ಘಾಟನಾ ಕಾರ್ಯಕ್ರಮದ ದಿವ್ಯ ಸಮ್ಮುಖವನ್ನು ಮೂಡುಗೂರು ಶ್ರೀ ಇಮ್ಮಡಿ ಉದ್ಧಾನ ಸ್ವಾಮಿಗಳು ವಹಿಸಿದ್ದರು. ಶ್ರೀಗಳು ಹಾಗು ಗಣ್ಯರು ಪೂಜ್ಯ ರಾಜೇಂದ್ರ ಶ್ರೀಗಳವರ ಭಾವಚಿತ್ರಕ್ಕೆ ಪುಷ್ಪನಮನವನ್ನು ಸಲ್ಲಿಸಿ, ಚಂಡೆ ಮದ್ದಳೆಯನ್ನು ಬಾರಿಸುವುದರ ಮೂಲಕ ಕಾರ್ಯಕ್ರಮಕ್ಕೆ ವಿಧ್ಯುಕ್ತವಾಗಿ ಚಾಲನೆ ನೀಡಿದರು.

ಶ್ರೀ ಇಮ್ಮಡಿ ಉದ್ಧಾನ ಸ್ವಾಮಿಗಳು ಮಾತನಾಡಿ ಚಾಮರಾಜನಗರವು ಕಲೆಗಳ ತವರೂರು. ಈ ಜಿಲ್ಲೆಯಲ್ಲಿ ಕಲೆಗಾರರು ಕಲೆಗೆ ಜೀವ ಹಾಗೂ ಶಕ್ತಿಯನ್ನು ತುಂಬಿ

ನಟಿಸುತ್ತಾರೆ. ನಾಟಕ ಎಂಬುದು ಬಹಳ ಅದ್ಭುತವಾದ ಕಲೆ. ಇಂದಿನ ದಿನಗಳಲ್ಲಿ ಜನಸಾಮಾನ್ಯರು ಧಾರಾವಾಹಿಗಳನ್ನು ವರ್ಷಾನುಗಟ್ಟಲೆ ವೀಕ್ಷಿಸುತ್ತಾರೆ. ಆದರೆ ವರ್ಷದ ಕಥೆಯನ್ನು ನಾಟಕವು ಕೇವಲ ಮೂರು ಗಂಟೆಗಳಲ್ಲಿ ತಿಳಿಸುತ್ತದೆ. ಇದುವೆ ನಾಟಕಕ್ಕೆ ಇರುವ ಶಕ್ತಿ. ಇಂದಿನ ವ್ಯವಸ್ಥೆಯಲ್ಲಿ ನಿಸ್ವಾರ್ಥತೆಯಿಂದ ಯಾವ ಕೆಲಸವನ್ನು ಮಾಡಿದರೂ ಅದು ಸಾರ್ಥಕವಾಗುತ್ತದೆ ಎಂದು ಹೇಳಿದರು.

ಮಾಜಿ ಸಚಿವರಾದ ಡಾ. ಗೀತಾ ಮಹದೇವಪ್ರಸಾದ್‌ರವರು ಮಾತನಾಡಿ, ರಂಗೋತ್ಸವದಲ್ಲಿ ಭಾಗವಹಿಸುವುದರಿಂದ ಮಕ್ಕಳಲ್ಲಿ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಸರ್ವತೋಮುಖ ಬೆಳವಣಿಗೆಯಾಗುತ್ತದೆ ಎಂದರು.

ಪ್ರಥಮ ಬಿ.ಎ ವಿದ್ಯಾರ್ಥಿನಿ ಕು. ಸ್ನೇಹ ಪ್ರಾರ್ಥಿಸಿದರು. ಪ್ರಾಚಾರ್ಯರಾದ ಡಾ. ಪಿ. ಮಹದೇವಮ್ಮ ಸ್ವಾಗತ ಕೋರಿದರು. ಜೆಎಸ್‌ಎಸ್ ರಂಗೋತ್ಸವದ ಸಂಚಾಲಕರಾದ ಶ್ರೀ ಚಂದ್ರಶೇಖರಾಚಾರ್ ಹೆಗ್ಗೊತಾರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಜೆಎಸ್‌ಎಸ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಚ್.ಪಿ. ಪಶುಪತಿ ವಂದಿಸಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಬಿ.ಎಸ್. ಅನಿತಾ ಕಾರ್ಯಕ್ರಮವನ್ನು ನಿರೂಪಿಸಿದರು. ತಾಲ್ಲೂಕಿನ ಭಕ್ತವೃಂದ, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ಬೋಧಕ ಮತ್ತು ಬೋಧಕೇತರ ವರ್ಗದವರು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು. ಕಾರ್ಯಕ್ರಮದ ಮೊದಲ ದಿನ ಮೈಸೂರಿನ ಲಕ್ಷ್ಮೀಪುರಂ ಜೆಎಸ್‌ಎಸ್ ಪ್ರೌಢಶಾಲೆ ವಿದ್ಯಾರ್ಥಿಗಳಿಂದ 'ಧಾಂ ಧೂಂ ಸುಂಟರಗಾಳಿ' ನಾಟಕವನ್ನು ಪ್ರದರ್ಶಿಸಲಾಯಿತು.

## ವಚನ ಸಾಹಿತ್ಯ ಸರಳ, ಸುಂದರ, ಮೌಲಿಕವಾದದ್ದು

**ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ** 332ನೇ ಶಿವಾನುಭವ ದಾಸೋಹ ಕಾರ್ಯಕ್ರಮವು ವಿ.ವಿ.ರಸ್ತೆಯ ಕೆ.ಎಸ್.ಎಸ್. ವಿದ್ಯಾರ್ಥಿನಿಲಯದಲ್ಲಿ ದಿನಾಂಕ 27.12.2025 ರಂದು ನಡೆಯಿತು. ಜೆಎಸ್‌ಎಸ್ ಮಹಿಳಾ ಕಾಲೇಜಿನ ಉಪನ್ಯಾಸಕರಾದ ಶ್ರೀಮತಿ ಎನ್. ನಾಗಲಾಂಬಿಕೆಯವರು 'ಇಂದಿನ ಪೀಳಿಗೆಗೆ ವಚನಗಳ ಪ್ರಸ್ತುತತೆ' ವಿಷಯ ಕುರಿತು ಉಪನ್ಯಾಸ ನೀಡುತ್ತಾ, ಒಂಬೈನೂರು ವರ್ಷಗಳ ಹಿಂದೆ ರಚಿತವಾದ ವಚನ ಸಾಹಿತ್ಯ ಇಂದು ಮತ್ತು ಎಂದೆಂದಿಗೂ ಪ್ರಸ್ತುತವಾಗಿದೆ. ತಂತ್ರಜ್ಞಾನವನ್ನು ಅಧ್ಯಯನ ಮಾಡಿಕೊಂಡು ಬೆಳೆಯುತ್ತಿರುವ ಇಂದಿನ ಮಕ್ಕಳು ಮೊಬೈಲ್‌ನಲ್ಲಿಯ ಎಲ್ಲ ವಿಷಯ ಹುಡುಕುವುದರಿಂದ ಓದಿ ತಿಳಿದುಕೊಳ್ಳುವ ಸಂಸ್ಕೃತಿ ಕಡಿಮೆಯಾಗಿದೆ. ಸರಳ, ಸುಂದರ, ಮೌಲಿಕವಾದ ವಚನಗಳನ್ನು ರಚಿಸಿದ ಬಸವಾದಿ ಶರಣರು ಅರಿವು, ಆಚಾರ, ಆರೋಗ್ಯ, ಆಶ್ರಯ ಮುಂತಾದ ಎಲ್ಲ ವಿಷಯಗಳನ್ನು ತಿಳಿಸಿದ್ದಾರೆ. ನುಡಿದರೆ ಮುತ್ತಿನ ಹಾರದಂತಿರಬೇಕು, ಅಯ್ಯಾ ಎಂದರೆ ಸ್ವರ್ಗ, ಎಲವೊ ಎಂದರೆ ನರಕ – ಮುಂತಾದ ವಚನಗಳ ಸಾಲುಗಳು ಬದುಕಿಗೆ ದಾರಿ ದೀಪದಂತಿವೆ. ವಚನಕಾರರಿಗೆ ದೂರದೃಷ್ಟಿ ಇತ್ತು. ಮೂಢನಂಬಿಕೆ, ಕಂದಾಚಾರಗಳನ್ನು ಬಿಡಬೇಕು, ನುಡಿದಂತೆ ನಡೆಯಬೇಕು, ವೃತ್ತಿಗಳಿಗೆ ಗೌರವ ಕೊಡಬೇಕೆಂಬುದನ್ನು ಆಚರಿಸಿ ತೋರಿಸಿದರು. ಪ್ರತಿಯೊಬ್ಬರೂ ದುಡಿದು ಉಣ್ಣಬೇಕು. ಯಾವುದೇ ಕೆಲಸ ಮೇಲಲ್ಲ, ಕೀಳಲ್ಲ. ಕಾಯಕ, ದಾಸೋಹ ತತ್ವವನ್ನು ಎಲ್ಲರೂ ಪಾಲಿಸಬೇಕು ಎಂದು ಸಾರಿದರು. ಬಸವಣ್ಣನವರು ಶರಣರ ಅನುಭಾವ ವಿನಿಮಯಕ್ಕಾಗಿ 'ಅನುಭವ ಮಂಟಪ'ವನ್ನು ಸ್ಥಾಪಿಸಿದರು. ಸಕಲ ಜೀವಾತ್ಮರಿಗೆ ಲೇಸನ್ನು ಬಯಸುತ್ತಾ, ಕಾಯಕವೇ




ಮೈಸೂರಿನಲ್ಲಿ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ನಡೆದ 332ನೇ ಶಿವಾನುಭವ ದಾಸೋಹ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಿಳಾ ಕಾಲೇಜಿನ ಉಪನ್ಯಾಸಕಿ ಶ್ರೀಮತಿ ಎನ್. ನಾಗಲಾಂಬಿಕೆಯವರು ಉಪನ್ಯಾಸ ನೀಡುತ್ತಿರುವುದು. (27 ಡಿಸೆಂಬರ್ 2025)

ಕೈಲಾಸವೆಂದು ಸಾರಿ ನಾಡು, ನುಡಿ, ಕಲೆ, ಸಾಹಿತ್ಯ, ಸಂಗೀತಗಳನ್ನು ಶರಣ ಪರಂಪರೆ ಬೆಳೆಸಿಕೊಂಡು ಬಂದಿದೆ ಎಂದು ತಿಳಿಸಿದರು.

ಕನ್ನಡ ಸಂಸ್ಕೃತಿ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕರಾದ ಶ್ರೀ ಡಿ. ನಾಗೇಂದ್ರಪ್ಪನವರು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕು. ಚೂಡಾಮಣಿಯವರು ವಚನ ಗಾಯನ ಹಾಗೂ ಪ್ರಾರ್ಥನೆಯನ್ನು ನಡೆಸಿಕೊಟ್ಟರು. ಶ್ರೀ ಕೆ.ಎಲ್. ಮುದ್ದಪ್ಪನವರು ಸ್ವಾಗತಿಸಿದರು. ಶ್ರೀ ವಿಶ್ವನಾಥ್ ಹಿರೇಗೌಡರವರು ವಂದಿಸಿದರು. ಶ್ರೀ ಡಿ. ಧ್ರುವಕುಮಾರ್‌ರವರು ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದ ಪ್ರಾಯೋಜಕತ್ವವನ್ನು ಗುರು ಸ್ವೀಟ್ಸ್ ಮಾರ್ಟ್‌ನ ಶ್ರೀಮತಿ ಮಹದೇವಮ್ಮ ಮತ್ತು ಮಕ್ಕಳು ವಹಿಸಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಶ್ರೀ ಶಿವರಾತ್ರಿಶ್ವರ ಅಕ್ಕನ ಬಳಗದವರು, ಸಾರ್ವಜನಿಕರು, ಸಾಹಿತ್ಯ ಜಿಜ್ಞಾಸುಗಳು ಪಾಲ್ಗೊಂಡಿದ್ದರು.



## ಖೇಲೋ ಇಂಡಿಯಾ ರಾಷ್ಟ್ರಮಟ್ಟದ ಮಲ್ಲಕಂಬ ಸ್ಪರ್ಧೆಗೆ ಆಯ್ಕೆ

ಗುಜರಾತ್‌ನ ದಮನ್ ಮತ್ತು ದಿಯುನಲ್ಲಿ ನಡೆಯಲಿರುವ ಖೇಲೋ ಇಂಡಿಯಾ ರಾಷ್ಟ್ರಮಟ್ಟದ ಮಲ್ಲಕಂಬ ಸ್ಪರ್ಧೆಗೆ ಜೆಎಸ್‌ಎಸ್ ವಸತಿ ಶಾಲೆಯ 9ನೇ ತರಗತಿಯ ವಿದ್ಯಾರ್ಥಿ ಕು. ಮನೋಜ್ ಐರಾಣಿ ಆಯ್ಕೆಯಾಗಿದ್ದಾರೆ. ಈ ಕ್ರೀಡಾಪಟುವನ್ನು ಸಂಸ್ಥೆಯ ಆಡಳಿತ ಮಂಡಳಿ, ಮುಖ್ಯಸ್ಥರುಗಳು ಹಾಗೂ ನೌಕರ ವೃಂದದವರು ಅಭಿನಂದಿಸಿದ್ದಾರೆ.

## Annual Day Celebrated



**JSS Public School, Teachers' Layout, Mysuru** celebrated its 10th Annual Day Celebrations on 24.12.2025. The Theme was "Yuga-Smaranam" (Remembering the Eras) with vibrancy and life being propelled into magnificent colours. The program was presided by Sri K.S. Sundar Raj, Deputy Commissioner of Police (Crime & Traffic), Mysuru. The Valedictory Speaker was Smt. Rashmi Koti, Managing Editor, 'Andolana' Newspaper, Mysuru. Sri S.P Manjunath, Secretary-1, JSS Mahavidyapeeta, Mysuru, presided over the function.

The programme commenced with offering of flowers and Ganesha Vandana. Ms. Vismayi Raj gave the welcome speech and inviting the guests and the gathering. The presentation of Annual Report highlighting the achievements of the school was read by Smt. M. Asha, Principal. This was followed by prize distribution, to recognize the student achievers who excelled in academics and co-curricular activities.

Sri K.S. Sundar Raj, the Chief Guest, in his thought-provoking speech advised the parents to spend quality time with their kids and instil in them a sense of respect for rules and discipline.

Smt. Rashmi Koti, the Guest of honour, addressed the gathering. In her speech, brought an extra glimpse to the parents and, their responsibilities in educating



their children. She said that the parents must lead by an example with no-phone zones during study time, since social media and mobiles bring far more disadvantages than benefits.

The Vote of thanks was proposed by Ms. Krish Rohit, from Grade 8th. At the end of the function, cultural events were presented. The performances started with an invocation dance from Grade 5th Students. Various events in the field of dramatics, dance and singing were performed by the students.

---

**ಮಾಸಿಕ ಸಾಮೂಹಿಕ ವಿವಾಹ 2026**
**ಸುತ್ತೂರು ಶ್ರೀಕ್ಷೇತ್ರ**

**ಮಾರ್ಚ್ 25 ಬುಧವಾರ**

ವಿವರಗಳಿಗೆ ಸಂಪರ್ಕಿಸಿ
ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಸಂಸ್ಥೆಗಳು ಸುತ್ತೂರು
ದೂರವಾಣಿ : 08221-232223, 232224

## JSS Inter-school Sports Competition-2025



In memory of Dr. Sri Shivaratri Rajendra Mahaswamiji Birth Celebration, an Inter-school Sports Competition was held at Sutturu from 25.11.2025 to 27.11.2025. Students of **JSS Public School, J.P. Nagar, Mysuru** participated in many events and won the prizes . 27 students from junior category and 31 students from senior category, in all, a total 58 students participated and brought many laurels to the school.

| Sl. No. | Student's Name | Class | Event | Prize |
|---|---|---|---|---|
| 1. | Sanvi S. Sali | 7th Std | 100 Mtr Running<br>200 Mtr Running | 2nd<br>3rd |
| 2. | Samarth | 9th Std | 400 Mtr Running<br>800 Mtr Running<br>1500 Mtr Running | 1st<br>1st<br>2nd |
| 3. | B. Khushi | 9th Std | Shotput<br>Discus throw | 1st<br>1st |
| 4. | D. Harshika | 10th Std | Shotput | 3rd |
| 5. | E. Dhanish | 10th Std | Long Jump | 3rd |

In senior category 4x100m Relay Race, Greeshma, Kushi, Deethyashree Urs and Deeksha have secured III place. The school also got II place in Marchpast. Samarth of Grade 9 won prizes in various events and got individual championship trophy along with a cash prize of Rs.4,000.

## Special Jury Award Presented




**JSS Public School, Ooty**, was honoured with the Special Jury Award by the Education News Network (ENN), a distinguished Division of EducationToday, during the 13th National Conference on K-12 Leadership and India School Merit Awards 2025 held at The Taj, Yeshwanthpur, Bengaluru on 5.12.2025. This honour marks a significant achievement for the institution and reflects its consistent efforts in delivering quality education.

The Education News Network, under Education Today, is known for its credible and comprehensive evaluation of schools across the country. Its awards recognise institutions that uphold strong academic standards, meaningful student participation, effective leadership, and an environment that supports growth and learning. With its extensive readership among educators and school leaders nationwide, the award carries a notable value.

The award was received, on behalf of the school, by Dr. Anitha Ramesh, Principal, whose leadership and guidance have played a vital role in shaping the school's vision and progress.

This recognition also acknowledges the dedicated efforts of the

Management, Correspondent, Principal, Vice-Principal, Academic Co-ordinator, teachers, students, and support staff, in making the school environment that encourages learning, discipline, creativity, and overall development.

The achievement will be featured in the January 2026 edition of Education Today, offering the school wider visibility and reinforcing its place among prominent educational institutions in the country.

## Induction Ceremony Held




**JSS Institute of Naturopathy and Yogic Sciences and Hospital, Navakkarai, Coimbatore,** conducted the Post-Graduate Induction Ceremony for 2025-26 on 12.12.2025. The programme marked the formal commencement of postgraduate program introducing the new students to the institute's academic, clinical, and ethical framework.

The programme began with a prayer, followed by a welcome address by Dr. V.R. Dhilip, Principal who emphasized the significance of postgraduate education that nurtures academic rigour, clinical competence, and holistic healthcare values. The lighting of the ceremonial lamp symbolized the

pursuit of knowledge and professional enlightenment.

Dr. J.S. Bhuvaneshwaran, Senior Consultant Cardiologist and Professor of Cardiology, PSG Super Specialty Hospital, in his address, highlighted the growing importance of integrated healthcare and encouraging students to develop clinical insight, ethical responsibility, and interdisciplinary awareness.

Sri R. Mahesh, Director, Medical Education Division, JSS Mahavidyapeetha, who was the Chief Guest, outlined the institution's vision rooted in compassion, innovation, and evidence-based practice, and stressed the responsibility of future physicians towards society.

Student reflections were shared by Dr. Shiva Durga, followed by a parent's perspective from Sri D. Sathiyaseelan, expressing confidence in the institute's academic standards. The Faculty Outlook was presented by Dr. Suresh Babu, Assistant Professor, who provided an overview of the curriculum, research opportunities, and expectations of the postgraduate programme.

The event concluded with guest felicitation, followed by vote of thanks by Sri Shanmugam, Administrative Officer, JSS INYS, and reciting the National Anthem.

## Inter-School Essay Competition

**JSS Public School, Teachers' Layout, Mysuru**, organized an Inter-School English Essay Writing Competition on 16.12.2025.

The event aimed at encouraging critical thinking and effective expression among the students. The themes for the competition were "The role of youth in shaping ethical leadership for the future" and "The importance of mental health in today's generation," which were highly relevant in the present-day context.

The programme commenced with a welcome by Ms. M. Unnathi, Grade 10 students, who greeted all the participants, teachers, and guests, and briefed them about the objectives of the competition. A total of 10 schools participated in the event, with two students representing each school. The participating schools were JSS Public

School, SJCE Campus; JSS Public School, J.P. Nagar; JSS Public School, Siddhartha Nagar; JSS Public School, Chamarajanagar; JSS Public School, Chikka Mandya; Podar International School, Mysuru; East West International School, Mysuru; Purna Chetana Public School, Mysuru; Navkis Educational Centre, Mysuru; and Delhi Public School, Mysuru.

At the conclusion of the event, Smt. M. Asha, Principal, expressed her heartfelt gratitude to the participants, mentors, and the participating schools for their enthusiastic involvement. She commended the students for their creative skills and confidence, and wished them success in their future academic pursuits as well.

All the participating students were awarded Certificates of Participation as a token of appreciation.

## Abhyudaya - 2025 Held




**JSS Public School, HSR Layout, Bengaluru,** celebrated its much-awaited Annual Day, Abhyudaya 2025, with great enthusiasm and splendour through two vibrant sessions that reflected the institution's unwavering commitment to excellence, values, and holistic education. The event held on 5.12.2025 stood as a testimony to the school's vision and endeavour to nurture responsible, confident, and socially conscious citizens.

Session 1 conducted for students from Nursery to Class V, was

thoughtfully conceptualized around the theme "Sustainability - Our Future, Our Responsibility."

The programme commenced with the auspicious lighting of the lamp by the dignitaries, marking the formal inauguration of the celebrations. The event was graced by Sri L.L. Meena, Regional Officer - CBSE, Bengaluru; Ms. Gowri B. Nataraj, Principal, JSS Public School, Banashankari, Bengaluru; and Dr. Anu Sharma, Principal, JSS Public School, HSR Layout, Bengaluru.

Addressing the gathering, Sri L.L. Meena appreciated the school's consistent efforts in imparting value-based education and promoting sustainability right from an early age. He lauded the institution's initiatives and emphasized the importance of nurturing young minds with awareness, responsibility, and strong ethical values.

This was followed by the presentation of the Annual Report by Dr. Anu Sharma, who highlighted the school's academic excellence, co-curricular accomplishments, and significant milestones during the year.

Proficiency Awards were conferred on the students who demonstrated outstanding academic performance, while the dignitaries felicitated winners of various inter-school competitions, acknowledging their talent, perseverance, and competitive spirit.

The young learners then took centre stage and mesmerized the audience with a series of graceful, energetic, and meaningful performances. Through captivating dances, skits, and thematic presentations, the students conveyed powerful messages on environmental conservation, simple living, cultural heritage, responsible use of technology, positivity in thought and action, and the importance of strong family values. Their confidence, coordination, and expressive artistry were a true reflection of dedicated mentorship and holistic learning.

The programme concluded with a visually appealing and emotionally engaging culmination sequence, symbolizing unity and hope for a sustainable future. The session ended on a patriotic note with the National Anthem, leaving the audience inspired and deeply appreciative of the students' commendable efforts.

Session 2, organized for students of Classes VI to XI, revolved around the powerful and visionary theme "India @2047 - Breaking Barriers." The programme offered a compelling

glimpse into India's inspiring journey after the independence. Through a series of well-researched presentations, creative enactments, and energetic performances, students vividly portrayed the nation's progress and aspirations for the future.

The session was graced by Sri Deepesh Goyal, Regional Mentor for Change, NITI Aayog - Karnataka Region, who commended the students for their futuristic outlook, clarity of thought, and impactful storytelling. He appreciated the school's efforts in nurturing socially aware and forward-thinking citizens who are prepared to contribute meaningfully to the nation's growth.

Dr. Anu Sharma, Principal, presented the Annual Report, highlighting the school's academic excellence, co-curricular accomplishments, and overall growth during the academic year. Students who excelled in academics, sports, and co-curricular activities were felicitated, acknowledging their achievements.

The presentations highlighted key areas such as industrial growth, advancements in education, women empowerment, economic development, the evolution of entertainment, and sustainable agricultural practices. Each segment reflected India's resilience, innovation, and transformative spirit, emphasizing the determination to overcome challenges and break barriers on the path to progress.

The programme concluded with an impressive and visually captivating presentation, symbolizing hope, unity, and progress. This was followed by a stirring rendition of Vande Matharam that filled the atmosphere with patriotic fervour and pride.

Parents and guests expressed heartfelt appreciation for the dedicated efforts of the staff, outstanding performances of the students, and the thoughtful selection of themes. Abhyudaya 2025 was widely appreciated as a memorable and meaningful celebration that successfully blended creativity, values, and vision for the future.

□

## "Excellence for Women in STEM 2025" Award

**JSS Science and Technology University, Mysuru,** has been conferred with "CII Award on Excellence for Women in STEM 2025" for the second consecutive year, reaffirming its sustained efforts to advance diversity,




equity and inclusion in Science, Technology, Engineering and Mathematics (STEM). The award was presented by the Confederation of Indian Industry, India during the Global Summit on Technology, R&D, and IP.

The award ceremony was held on 17.12.2025 at Le Méridien, New Delhi, bringing together industry leaders and eminent experts committed to strengthening women's participation and leadership in STEM. Dr. Vanishri Arun and Dr. Sindhu Bharath represented JSS STU and received the award from distinguished dignitaries including Dr. Ashish Mohan, Executive Director, CII; Dr. Vaishali Nigam Sinha, Chair, CII Women in STEM initiatives & Co-Founder, ReNew and Chairperson (Sustainability); Ms. Inge Buffalo, Director, European Union Intellectual Property Office; and Dr. Chandrika Kaushik, Distinguished Scientist & Director General, Production Coordination & Services Interaction, DRDO, Government of India. JSS STU was recognised among the Top 10 institutions following a rigorous evaluation process.

The recognition highlights JSS STU's multi-pronged approach to enabling women in STEM spanning gender-equitable hiring, capacity building and professional development, leadership programmes, and workplace flexibility, aimed at ensuring women have the support and opportunities to excel, innovate and lead at every level.

Congratulating the team, Dr. A.N. Santosh Kumar, Vice-Chancellor, and Prof. Dr. S.A. Dhanaraj, Registrar, appreciated the collective efforts led by Dr. N. Haraprasad, Dean-QAA, along with Dr. Pushpa Tuppad and Dr. S. Prajna and extended their best wishes for continued progress in strengthening women's representation and leadership in STEM.

## Seminar on "The Science and Technology of Food"

The Department of Chemistry, **JSS Academy of Technical Education, Bengaluru,** organized the 7th Popular Lecture on "The Science and Technology of Food" on 13.12.2025, for the I semester BE students (Chemistry Cycle). The seminar was attended by around 300 students and aimed at introducing them to the fundamentals and emerging trends in Food Science and Technology.

The programme featured Dr. R. Suhas, Senior Scientist, Department of Plantation Products, Spices and Flavour Technology, CSIR-Central Food Technological Research Institute, Mysuru, as the resource-person. Dr. B. Roopashree, Head of the Department of Chemistry, welcomed the gathering; Dr. J. Puneetha, Assistant Professor introduced the speaker.

Dr. R. Suhas, in his lecture, presented an engaging overview of Food Science by integrating core chemical principles with modern food processing and engineering concepts. He discussed recent technological advancements in food processing, preservation, quality control, and automation, highlighting their importance to public health, industrial growth, and sustainability. The session also emphasized the vital role engineers can play in developing innovative, efficient, and eco-friendly food technologies, thereby opening new interdisciplinary career pathways for students.

The lecture was well-received and stimulated keen interest among participants, enhancing their application of engineering principles in food technology and sustainable practices. The programme was co-ordinated by Dr. J. Puneetha. The event successfully fostered scientific awareness and encouraged students to explore the expanding scope of food chemistry and technology in today's world.

## NSS and YRC Units: Outreach Programmes




The National Service Scheme (NSS) and Youth Red Cross (YRC) Units of **JSS Academy of Technical Education, Bengaluru,** organized a series of social, health, and awareness programmes between 20.11.2025 and 1.12.2025, demonstrating the institution's commitment to community welfare and responsible citizenship.

The initiatives began with a Medical Check-up Camp on 20.11.2025, conducted in collaboration with Atreum Specialty Hospital and Happy Aura Hospital at the campus. The camp provided preventive healthcare services to 115 students and staff members, including blood pressure and blood sugar screening, ECG, dental and oral health check-ups, general medical consultation, and health awareness guidance.

On 22.11.2025, the NSS Unit actively participated in the Rashtriya Ekta Diwas held at Kurubarahalli, Mahalakshmi Layout, Bengaluru, organized by the Ministry of Youth Affairs and Sports. 65 NSS volunteers took part in the march to commemorate the 150th Birth Anniversary of Sardar Vallabhbhai Patel, spreading the message of national unity, integrity, and social harmony.

Continuing its health outreach programs, the NSS and YRC Units organized a Blood Donation Camp on 26.11.2025 at the campus, in association with the Indian Red Cross, Bangalore

Medical Service Trust (BMST), and HDFC Bank, J.P. Nagar. The camp received an overwhelming response, with around 600 students participating and 352 students and staff members donating blood, following the prescribed medical and safety protocols.

The events concluded with an Awareness Programme on 1.12.2025, about Women Safety, Cybercrime, and Anti-Drug Abuse, organized in collaboration with the Police Department, Government of Karnataka. The programme, attended by 180 students and staff members, featured expert sessions by police personnel who addressed personal safety, cyber threats, and substance abuse and prevention. The event concluded with a collective pledge for a safer and drug-free society.

All the programmes were successfully conducted under the guidance of Dr. N. Girish, NSS Programme Officer, and Sri M. Manjunatha, Department of ECE, reinforcing the Academy's role in promoting health awareness, national integration, and social responsibility among the students.

## JSS ATE Bengaluru Student Part of Guinness World Record Achievement




Sri J. Prajwal, a 3rd semester B.E. (Civil) student, **JSS Academy of Technical Education, Bengaluru,** has brought pride to the institution by being part of a team that secured a Guinness World Record title. The record-setting event witnessed the participation of 863 performers, and the team was awarded First Prize for its outstanding performance.

The achievement was accomplished under the banner of the World Karate Masters Association (WKMA), India, during a grand event held at Chennai on 5.10.2025. The programme contributed to the promotion, development, and global recognition of karate as a martial art. Sri Prajwal received the award on 27.11.2025.



ಮಳವಳ್ಳಿಯಲ್ಲಿ ಜರುಗಿದ ನಡೆದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸನ್ಮಾನ್ಯ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮುರವರು 'ಮಳವಳ್ಳಿ ಶ್ರೀಪ್ರಭೆ' ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಚಿತ್ರದಲ್ಲಿ ಶ್ರೀ ಥಾವರ್ ಚಂದ್ ಗೆಹ್ಲೋತ್, ಶ್ರೀ ಹೆಚ್.ಡಿ. ಕುಮಾರಸ್ವಾಮಿ ಮತ್ತು ಶ್ರೀ ಎನ್. ಚಲುವರಾಯಸ್ವಾಮಿಯವರಿದ್ದಾರೆ. (16 ಡಿಸೆಂಬರ್ 2025)



ಮಳವಳ್ಳಿಯಲ್ಲಿ ಜರುಗಿದ ಜಯಂತಿ ಮಹೋತ್ಸವದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಬೆಳ್ಳಿಪಲ್ಲಕ್ಕಿ ಉತ್ಸವಕ್ಕೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಿದ ಸಂದರ್ಭದಲ್ಲಿ ಉತಸ್ಥಿತರಿದ್ದ ವಿವಿಧ ಮಠಾಧೀಶರುಗಳು. (21 ಡಿಸೆಂಬರ್ 2025)

Registered with the Registrar of Newspapers for India No. KARBIL/2014/66470
'JSS Varthapathra' Monthly, Vol. 11, Issue No. 1, January 2026



ಮಳವಳ್ಳಿಯಲ್ಲಿ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವದ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ ಸನ್ಮಾನ್ಯ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮುರವರನ್ನು ಪರಮಪೂಜ್ಯ ಜಗದ್ಗುರುಗಳವರು ಸ್ವಾಗತಿಸುತ್ತಿರುವುದು. ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋತ್ ಮತ್ತು ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿರವರುಗಳಿದ್ದಾರೆ (16 ಡಿಸೆಂಬರ್ 2025)

ಸಂಪಾದಕ: ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ * ನೆರವು: ಆರ್.ಎಸ್. ಪೂರ್ಣಾನಂದ * ಸಹ ಸಂಪಾದಕ: ಮ.ಗು. ಬಸವಣ್ಣ
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
0821-2548212 Extn. 49 * varthapathra@jssonline.org * www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು
ಬಿಡಿ ಪ್ರತಿ: 10 ರೂ.